ಶ್ರೀ ಶನಿಮಹಾತ್ಮ್ಯ

ಲೇ: ಮುರಹರ ರಾಮಚಂದ್ರ ಶಿವಪ್ಪೈಜೆ

ಶ್ರೀ

ಮಾಲತೀಶಾರ್ಪಿತ ಚತುರ್ಥ ಕುಸುಮವಾದ

ಹೊಸ ಕನ್ನಡ ಪದ್ಯಾತ್ಮಕ

ಶ್ರೀ ಶನಿಮಹಾತ್ಮ್ಯೆ

ಲೇಖಕ ಹಾಗು ಪ್ರಕಾಶಕ:—

ಮುರಹರ ರಾಮಚಂದ್ರ ಶಿವಪೂಜಿ,

ಶ್ರೀ ಮಾಲತೀಶಾರ್ಚಕ, ದೇವಗಿರಿ.

೧೯೨೬

ಬೆಲೆ ೪ ಆಣೆ.

II

...ಂದ
...ಲ್ಲಿಯ
...ಾನು
...ಬಂದ
...ಳ್ಳು

5-12-1925 } ಹೆ|| ಮಾ|| ಗುತ್ತಲ.

ಮು. ರಾ. ಶಿವಪೂಜಿಯವರಿಂದ ರಚಿತವಾದ ಉತ್ತಮ

ಪುಸ್ತಕಗಳು.

(1) ಶ್ರೀ ಶಿವಾನಂದಲಹರಿ	ಬೆಲೆ ೨ ಆಣೆ.
(2) ಶ್ರೀ ಮಾಲತೀಶ ಪ್ರಸಾದ	ಬೆಲೆ ೧|| ಆಣೆ.
(3) ಹಾದಿಗನ ಹರಟೆ	ಬೆಲೆ ೧|| ಆಣೆ.
(4) ಶ್ರೀ ಶನಿಮಹಾತ್ಮ್ಯ	ಬೆಲೆ ೩ ಆಣೆ.

೮ ಆಣೆಯ ಪೋಸ್ಟಿನ ಟಿಕೀಟನ್ನು ಕಳಿಸಿದರೆ, ಈನಾಲ್ಕು ಪುಸ್ತಕಗಳನ್ನು ನಮ್ಮ ಖರ್ಚಿನಿಂದಲೇ ಬುಕ್‌ಪೋಸ್ಟಿನಿಂದ ಕಳಿಸುವೆವು.

ವಿಳಾಸ:—ಮುರಹರ ರಾಮಚಂದ್ರ ಶಿವಪೂಜಿ,
ಪೋ|| ದೇವಗಿರಿ, ತಾ|| ಹಾವೇರಿ, ಜಿ|| ಧಾರವಾಡ.

ಶ್ರೀ

ಮಾಲತೀಶಾರ್ಪಿತ ಚತುರ್ಥ ಕುಸುಮವಾದ

ಹೊಸ ಕನ್ನಡ ಪದ್ಯಾತ್ಮಕ

ಶ್ರೀ ಶನಿಮಹಾತ್ಮ್ಯೆ.

ಲೇಖಕ ಹಾಗು ಪ್ರಕಾಶಕ:—

ಮುರಹರ ರಾಮಚಂದ್ರ ಶಿವಪೂಜಿ,

ಶ್ರೀ ಮಾಲತೀಶಾರ್ಚಕ, ದೇವಗಿರಿ.

೧೯೨೬

ಬೆಲೆ ಆಣೆ.

ಲೇಖಕನ ಮಾತು.

ಶ್ರೀ ಗುರುದೇವ ಭಕ್ತರಾದಂಥಾ, ಪರಮ ಪೂಜ್ಯರೇ, ಅತ್ಯಲ್ಪ ಬುದ್ಧಿಯ ಬಲದಿಂದ ಅತಿ ಮಹಾತ್ಮನಾದ ಶ್ರೀ ಶನಿಯ ಚರಿತ್ರವು ಹೊಸ ಗನ್ನಡ ಪದ್ಯರೂಪದಿಂದ ರಚಿತವಾಗಿ ತಮ್ಮೆದುರಿಗೆ ಬಂದಿದೆ. ಇದನ್ನು ತಮ್ಮ ದೊಡ್ಡಸ್ತಿಕೆಗನುಗುಣವಾಗಿ ಪರಿಗ್ರಹಿಸಿ, ಹಂಸಕ್ಷೀರ ನ್ಯಾಯದಂತೆ ತಪ್ಪಿದ್ದವುಗಳನ್ನು ತಿದ್ದಿ ತಿಳಿಸುತ್ತ, ಒಪ್ಪಿದ್ದವುಗಳನ್ನು ಒಪ್ಪುತ್ತ ರಂಜಿಪ ಶುದ್ಧ ಸ್ಥಿತಿಯನ್ನುಂಟುಮಾಡಿ, ಪರಿಪಕ್ವ ಹೃದಯದಿಂದ ಆನತರನ್ನು ಪರಿ ಪೂತರನ್ನು ಮಾಡುವ ಹುಟ್ಟು ಗುಣವು ತಮ್ಮಂಥ ಮಹಾತ್ಮರಲ್ಲಿ ಸಹಜ ವಾಗಿರುವದರಿಂದ, ನಮ್ರನಾಗಿ ವಂದಿಸುವೆನು.

॥ ಭಾಮಿನಿ ಷಟ್ಪದಿ. ॥

ಶ್ರೀ ಶನೇಶ್ವರ ಚರಿತವದು ತಾ । ನೀಶನಪ್ಪಣೆಯಿಂದ ಕನ್ನಡ ।
ಭಾಷೆಯೊಳಗದು ನುಡಿಸುತಿರಲಾಯ್ತೀಶ ನಿರ್ಮಿತದೀ॥
ನಾ ಸಮರ್ಥನುಮಲ್ಲ ನಾನಾ । ಭಾಷೆಗಲಿತಿಹ ಪ್ರಾಜ್ಞನಲ್ಲೈ ।
ದೋಷದೂಡುತ ರಸವ ಗ್ರಹಿಪುದು ಬಾಲ ಭಾಷೆಯೊಳು ॥

ಈ ಗ್ರಂಥವು ತಿದ್ದಲ್ಪಟ್ಟು ಲೋಕಾಶ್ರಯವನ್ನು ಪಡೆಯುವದಕ್ಕಾಗಿ

ಕೃಪಾಸಮುದ್ರಂಸುಮುಖಂತ್ರಿನೇತ್ರಂ।ಜಟಾಧರಂಪಾರ್ವತಿವಾಮಭಾಗಂ।
ಸದಾಶಿವಂ ರುದ್ರಮನಂತರೂಪಂ । ಚಿದಂಬರೇಶಂ ಹೃದಿಭಾವಯಾಮಿ ॥

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಬ್ರಹ್ಮಾ ತಸ್ಮೈ ಶ್ರೀಗುರವೇನಮಃ ॥
ಆದಿತ್ಯಾಯಚ ಸೋಮಾಯ ಮಂಗಳಾಯ ಬುಧಾಯಚ ।
ಗುರು ಶುಕ್ರ ಶನಿಭ್ಯಶ್ಚ ರಾಹುವೇ ಕೇತುವೇನಮಃ ॥
ಅಪರಾಧಃ ಸಹಸ್ರಾಣಿ ಕ್ರಿಯಂತೇಽಹರ್ನಿಶಂಮಯಾ ।
ತಾನಿ ಸರ್ವಾಣಿ ಮೇ ದೇವ ಕ್ಷಮಸ್ವ ಪರಮೇಶ್ವರ ॥

ಈ ಪ್ರಕಾರ ಮನಸಾ ಚಿಂತಿಸಿ ಮುಂದಿನ ಕಾರ್ಯಕ್ಕೆ ಅನುಜ್ಞೆ ಯಂ ಪಡೆಯುವೆನು.

ಮುರಹರ ರಾಮಚಂದ್ರ ಶಿವಪೂಜಿ.

ಪ್ರಸ್ತಾವನೆ.

ಈ ಭೂಮಂಡಲದೊಳಗಿನ ಸರ್ವಜನಾಂಗಗಳನ್ನು ಸೂಕ್ಷ್ಮರೀತಿಯಿಂದ ಅವಲೋಕಿಸಿದರೆ, ಸ್ವಾತಂತ್ರ್ಯ, ಸಾಂಪತ್ತಿಕ ಸ್ಥಿತಿ ಮೊದಲಾದವುಗಳದೃಷ್ಟಿಯಿಂದ ಅತ್ಯುಚ್ಚ ಪದವಿಗೇರಿದ ಜನಾಂಗಗಳು ತಮ್ಮ ತಮ್ಮ ಧರ್ಮಗಳ ದೃಷ್ಟಿಯಿಂದ ಉಚ್ಚಸ್ಥಿತಿಯಲ್ಲಿಯೇ ಇರುವದನ್ನು ಕಾಣಬಹುದು. ಆ ಜಗಾಂಗಗಳ ಧರ್ಮಜಾಗ್ರತೆಯು ವಿಲಕ್ಷಣವಾದದ್ದಿರುತ್ತದೆ. ಇದರ ವಿರುದ್ಧವಾಗಿ, ಅಸ್ವಾತಂತ್ರ್ಯ, ದಾರಿದ್ರ್ಯ ಮೊದಲಾದವುಗಳಿಂದ ಗ್ರಸ್ತವಾದ ಜನಾಂಗಗಳ ಧಾರ್ಮಿಕ ಸ್ಥಿತಿಯು ಕೇವಲ ಹೀನದೆಶೆಯಲ್ಲಿದ್ದದ್ದನ್ನು ಕಾಣಬಹುದು. ಅವರ ಧರ್ಮಲಂಡತನವೂ ಪರಧರ್ಮದವರ ಬಾಹ್ಯಡಾಂಭಿಕ ಆಚರಣೆಗಳೂ ಹೆಚ್ಚುತ್ತ ನಡೆದಿರುವದನ್ನೂ, ಅದೇ ಮಾನದಿಂದ ಆ ಜನಾಂಗಗಳು ಸರ್ವತೋಮುಖಿಯಾಗಿ ಅವನತ ಸ್ಥಿತಿಗಿಳಿಯುತ್ತಿರುವದನ್ನೂ ಸಹಜವಾಗಿ ನೋಡಬಹುದು. ಧಾಮಿಕೋನ್ನತೆಗೂ, ಲೌಕಿಕೋನ್ನತೆಗೂ ಗುಪ್ತವಾದ ನಿಕಟ ಸಂಬಂಧವಿರುತ್ತದೆಂಬ ಕಾರಣದಿಂದಲೇ ಆಯಾ ಜನಾಂಗಗಳಲ್ಲಿ ಅವತರಿಸಿದ ಮಹಾತ್ಮರು, ತಮ್ಮ ಜನಾಂಗಗಳ ಧಾರ್ಮಿಕೋನ್ನತೆಯ ವಿಷಯವಾಗಿ ಯತ್ನ ಮಾಡುತ್ತಿರುವರು. ಅವರಿಂದ ಬರೆಯಲ್ಪಟ್ಟ ಗ್ರಂಥಗಳೂ ಇದೇ ಕಾರ್ಯವನ್ನು ಮಾಡುತ್ತವೆ.

ಧಾರ್ಮಿಕೋನ್ನತೆಯು ವ್ಯಕ್ತಿಯ ಭಕ್ತಿಯನ್ನವಲಂಬಿಸಿರುವದರಿಂದ ಭಕ್ತಿರಸ ಪ್ರಾಧಾನ್ಯವಾದ, ವಚನ ಗ್ರಂಥಗಳೂ, ಕವಿತಾಗ್ರಂಥಗಳೂ, ನಾಟಕಗ್ರಂಥಗಳೂ ಕಾಲ ಕಾಲಕ್ಕೆ ಪ್ರಸಿದ್ಧವಾಗಿ ಆಯಾ ಜನಾಂಗಗಳಲ್ಲಿ ಬೆಳಗುತ್ತಲಿವೆ. “ಭಿನ್ನರುಚಿರ್ಹಿ ಲೋಕಃ” ಎಂಬ ಉಕ್ತಿಗನುಸರಿಸಿ ಜನಾಂಗದೊಳಗಿನ ಪ್ರತಿಯೊಂದು ವ್ಯಕ್ತಿಯು ತನತನಗುಚಿತವಾದ

ಗ್ರಂಥಗಳಿಂದ ಭಕ್ತಿಯುತವಾಗಿ ಇಡೀ ಜನಾಂಗದ ಧಾಮಿಕೋನ್ನತಿಯನ್ನು ಸಾಧಿಸಿಕೊಳ್ಳಲು ಸಮರ್ಥವಾಗುವವು.

ಈ ತತ್ವಕ್ಕನುಸರಿಸಿ, ಕರ್ನಾಟಕಭಾಷೆಯಲ್ಲಿ ಈ ಮೊದಲು ಪ್ರಸಿದ್ಧವಾಗಿದ್ದ 'ಶನಿಪ್ರಭಾವ' ಎಂಬ ನಾಟಕವು ಹಿಂದೂ ದೇವತೆಗಳೊಳಗಿನ 'ಶ್ರೀ ಶನಿಮಹಾದೇವ' ನ ವಿಷಯವಾಗಿ ಜನರಲ್ಲಿ ಭಕ್ತಿರಸವನ್ನು ತುಂಬುತ್ತಿರುವದು. ಇದೇ ತತ್ವಾನುಸಾರವಾಗಿಯೇ ಶ್ರೀಯುತ ಮುರಹರ ರಾಮಚಂದ್ರ ಶಿವಪೂಜಿ, ದೇವಗಿರಿ, ಇವರಿಂದ ರಚಿತವಾದ "ಶನಿಮಹಾತ್ಮ್ಯ"ವೆಂಬ ಈ ಕವಿತಾರೂಪ ಗ್ರಂಥವು "ಶ್ರೀಮಂದದೇವ" ನ ವಿಷಯವಾಗಿ ವಾಚಕವರ್ಗದಲ್ಲಿ ಭಕ್ತಿರೂಪದಿಂದ ಬೀಜವನ್ನು(ದೇಹಶುದ್ಧಿಯನ್ನುಮಾಡಿ, ಗರ್ವರೂಪವಾದ ಕಶ್ಮಲವನ್ನು ಕಿತ್ತೊಗೆದು) ಊರುತ್ತದೆನ್ನಲಿಕ್ಕೆ ಬಾಧಕವಿಲ್ಲ.

ಗ್ರಂಥಕರ್ತೃಗಳು ದೇವಗಿರಿಯಲ್ಲಿ ಶ್ರೀ ಮೈಲಾರಲಿಂಗನ ಅರ್ಚಕರಿದ್ದು ಶ್ರೀ ಮೈಲಾರೇಶನ ವಿರಾಟರೂಪವನ್ನೇ ಭಕ್ತಿಯಿಂದ ಪೂಜಿಸುತ್ತಿರುವರು. (ಜಾತಿಭೇದವಿಲ್ಲದೇ ಅತಿಥಿ ಸತ್ಕಾರವನ್ನು ಮಾಡುತ್ತಿರುವರು) ವಾಚನಾಲಯವನ್ನಿಟ್ಟು ಜನರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸುತ್ತಿರುವರು. ಅರ್ಥಾತ್ ಇಂಥ ಯೋಗ್ಯ ಪಾತ್ರತೆಯುಳ್ಳವರಿಂದ ಬರೆಯಲ್ಪಟ್ಟ ಈ ಗ್ರಂಥದ ಭಾಷೆಯು ಸರಳವಾದದ್ದಿದ್ದು, ಲಲಿತಪದ ಪ್ರಯೋಗಗಳಿಂದ ಅಂದವಾಗಿರುವದು.

ಭಕ್ತಿರಸಪೂರ್ಣವಾದ ಈ ಗ್ರಂಥವು ಹಿಂದೂಧರ್ಮಿಗಳೆನಿಸುವ ಪ್ರತಿಯೊಬ್ಬರ ಮನೆಯಲ್ಲಿ ಸಂಗ್ರಹಿಸಲಿಕ್ಕೆ ಯೋಗ್ಯವಾಗಿರುತ್ತದೆ. ಗ್ರಹದೇವತೆಗಳ ಮಹಿಮೆಯು ಶಕ್ಯಾಶಕ್ಯತೆಯ ವಿಷಯವಾಗಿ ಧರ್ಮಲಂಡತನದಿಂದ ವಿಚಾರಿಸುವದು ಯೋಗ್ಯವಲ್ಲ. ಧಾರ್ಮಿಕ ತತ್ವದೃಷ್ಟಿಯಿಂದ ವಿಚಾರಿಸಿ ಅನುಭವ ತಕ್ಕೊಳ್ಳುವವರಿಗೇ ಅದರ ರಹಸ್ಯವು ಗೊತ್ತಾಗುವದಲ್ಲದೆ ಇತರರಿಗೆ ತಿಳಿಯಲಾರದೆಂಬದು ಸ್ಪಷ್ಟವದೆ.

ಈ ಗ್ರಂಥವಾಚನದಿಂದ ಹಿಂದು ಜನರ ಧಾರ್ಮಿಕೋನ್ನತಿಗೆ ಸಹಾಯವಾಗುವದಲ್ಲದೆ, ಗ್ರಂಥಕರ್ತರಿಂದ ನಡೆಯಿಸಲ್ಪಟ್ಟ ಸ್ತುತ್ಯವಾದ ಸಮಾಜಸೇವಾಕಾರ್ಯಕ್ಕೂ ಸಹಾಯವಾಗುವದೆಂದು ಪೂರ್ಣನಂಬಿಗೆಯದೆ.

ತಮ್ಮ,

ಲಿಂಗೋ ರಾಮಚಂದ್ರ ಅಕ್ಕೂರ,

ಕ. ಗಂಡು ಹಿ. ಶಾಲಾ ಅಗಡಿ. (ತಾ. ಹಾವೇರಿ.)

ಓಂ ತತ್ಸತ್.

|| ಶ್ರೀ ಪಾಂಡುರಂಗಾಯನಮಃ ||

|| ಶ್ರೀ ಆದಿತ್ಯಾದಿ ನವಗ್ರಹಾಂತರ್ಗತ ಶ್ರೀಗುರು ಜಗಚ್ಚಾಲಕಾಯನಮಃ ||

|| ಶ್ರೀರಸ್ತು || || ಶುಭಮಸ್ತು ||

ಶ್ರೀ ಶನಿಮಹಾತ್ಮ್ಯವು.

ಮೊದಲನೆಯ ಸಂಧಿ ಪ್ರಾರಂಭವು.

ಸೂಚನೆ:— [ಭಾಮಿನಿ ಷಟ್ಪದಿ]

ಅವನಿತಳದೊಳು ವಿಕ್ರಮಾರ್ಕನು | ಕವಿಗೆಳಿಂ ನವಗ್ರಹಗೆಳಿರವನು |
ಭವದ ನಾಶಕ್ಕಾಲಿಸಲ್ ಶನಿ ಜರಿಯೆ ಕಾಡಿಹನು ||

ಪದ್ಯಗಳು:—

ಶ್ರೀ ಗಜವದನ ಶಿವತನಯ ವಿ | ದ್ಯಾಘ ಸಚಿದಾನಂದ ಮೂರುತಿ |
ಭೋಗಿಭೂಷಣ ವಿಘ್ನದೂರನೆ ನಿನ್ನ ಸ್ಮರಣೆಯಲೀ ||
ಸಾಗುತಿರ್ಪೀ ಬಾಲನೊಳು ನೀಂ | ಬೇಗದಿಂದುರ ವರವ ನೀಡೈ |
ತೂಗುವಂದದೆ ಸುಜನ ವೃಂದವು ಶಿರವನೊಲಿದೊಲಿದೂ || 1 ||

ತಾಯೆ ಶಾರದೆ ಭಕ್ತ ಜನರನು | ಮಾಯೆಯಿಂದಲಿ ಸಲಹುವಾ ವರ |
ದಾಯತಾಂಬಕಿ ಬೊಮ್ಮಕುವರಿಯೆ ವಿದ್ಯದಧಿದೇವೀ ||
ತೋಯಜಾಕ್ಷನ ಸುತನ ರಾಣಿಯೆ | ಕಾಯ-ವಾಙ್ಮನಸಿಂದ ಭಜಿಪನ |
ಕಾಯಬೇಕೌ ಪೇಳಿದುಕ್ತಿಗೆ ರಸನ ನೀಡುತಲೀ || 2 ||

ಕರುಣಸಾಗರನಾಜ್ಞೆಯಿಂದಲಿ | ವರದ ಕವಿಯೆಂದೆಂಬ ಘನತರ |
ಬಿರುದು ಧರಿಸಿದರಾದಿ ತಾತರ ಪಾದ ಪಂಕಜಕೇ ||
ನಿರುತದಿಂದಲಿ ವಿದ್ಯೆ ಪೇಳುವ | ವರದ ಗುರುವಿಗೆ ಸಾಧುವೃಂದಕೆ |
ಶಿರವ ಬಾಗಿಸಿ ಬೇಡಿಕೊಂಬೆನು ಹಸುಳನೋವಲ್ಕೇ || 3 ||
ಪಾಂಡುರಂಗನೆ ಪಾದಕಮಲವ | ಕಂಡು ಝೇಂಕರಿಸುತ್ತ ನಿಜಸುಖ |
ಕಂಡಲೆವ ಮದದುಂಬಿಯನ್ನುರೆ ಉಣಿಸು ಮೋಹದಲೀ ||
ಕಂಡು ಗುಜರಾಥದಲಿ ಮೆರೆಯುವ ಗಂಡುಗಲಿ ನವಗ್ರಹದ ಚರಿತವು |
ಪಾಂಡುರಂಗನ ದಯದೆ ಕನ್ನಡದಲ್ಲಿ ತಾನಾಯ್ತು || 4 ||
ಬಗೆಯ ನೀಡುತ ಭಕ್ತಿಯಿಂದಲಿ | ಸೊಗಯಿಸುವ ಸತ್ಕಥೆಯನೆಲ್ಲರು |
ನಿಗಮಗೋಚರ ಮೆಚ್ಚುವಂದದೆಯೋದಿ ಕೇಳುವದೂ ||
ಮಿಗಿಲೆನಿಸಿಕೊಳುತಿರ್ಪ ವಿಕ್ರಮ | ಸೊಗಸು ತೋರುವ ತೆರದಿ ಪ್ರಜೆಗಳ |
ಬಗೆಗೆ ಸ್ತುತಿಗತಿ ಪಾತ್ರನಾಗಿಹ ಕೇಳು ಪೂರ್ವದಲೀ || 5 ||
ವಿಕ್ರಮಾರ್ಕನು ತನ್ನ ರಾಜ್ಯವ | ನಕ್ಕರಿಂದಲಿ ಪೊರೆಯುತಿರುಲಾ |
ಚಿಕ್ಕ ಬಲ್ಲಿದ ಪಂಡಿತಾಳಿಗಳಿಂದ ಸಭೆಗೂಡಿ ||
ಚೊಕ್ಕ ಮನಸಿನೊಳುತ್ಸುಕತೆಯಿಂ | ತಕ್ಕ ಪಂಡಿತರನ್ನೆ ನೋಡುತ |
ವಿಕ್ರಮಾರ್ಕನು ವಿಷಯ ತರ್ಕಗಳನ್ನು ಜರುಗಿಸಿದ || 6 ||
ಕವಿಗಳೆಷ್ಟೋ ಜನರು ರಂಜಿಸ | ಲವನಿಪಾಲಕ ಪ್ರಶ್ನೆಗೇಳಿದ |
"ತವಕದಿಂದೊಂಬತ್ತು ಗ್ರಹದಲಿ ಮಿಗಿಲು ದಾರೆ"ಂದೂ ||
"ಅವರ ಪೂಜೆಯವಿಧವುದಾವದು | ಅವರ ಮಹಿಮೆಯದೆಂತುತೋರ್ಪುದು |
ಅವರ ಕೃಪೆಯೆಂತಿಹುದು? ಪೇಳ್ವುದು ದಯದೊಳಿಂದೆನಗೇ" || 7 ||
ರಾಜನಾಜ್ಞೆಯ ಪೊಂದುತನಿಬರು | ನೈಜದಿಂದನುಮತಿಸೆ ಬಂದುದೆ |
ಸೋಜಿಗೆವು ತಾನಾಗುವಂದದೆ ಪೇಳ್ದರನುಸರಿಸೀ ||
ತೇಜಮಾದಾ ರವಿಯೆ ಸಕಲಕೆ | ರಾಜನಾಗಿಹ ಗ್ರಹದ ಪೀಡೆಯು |
ಪೂಜೆಗೆಯ್ಯುವನನ್ನು ಮುಟ್ಟದು ಜನುಮ ಪರಿಯಂತ || 8 ||
ರವಿಯು ಸರ್ವೋತ್ತಮನು ಗ್ರಹದಲಿ | ರವಿಯು ನಾರಾಯಣನು ಸದ್ಯಕೆ |
ರವಿಯು ಮಹ ಸಾಮರ್ಥ್ಯಯುಳ್ಳವನವನೆ ಆದಿತ್ಯ ||
ರವಿಯು ಲೋಕಕೆ ಪ್ರಾಣರಕ್ಷಕ | ರವಿಯು ಸರ್ವಕೆ ಮೂಲಕಾರಣ |
ರವಿಯು ಭಜಿಸರಿಗಾವ ಚಿಂತೆಯು ನಿಲ್ಲದೆದುರಿಸಲೀ || 9 ||

ರವಿಯು ಮುಖ್ಯನು ದೇವರವನೇ | ರವಿಯು ವಾಕ್ಯವ ಸರ್ವರಾಲಿಸಿ |
ರವಿಯು ಪೇಳಿದ ತೆರದಿ ನಡೆವರು ಸಕಲ ಗ್ರಹ ಸಹಿತ ||
ರವಿಯ ಸಾಮರ್ಥ್ಯವನು ಬಣ್ಣಿಸ | ಲವನಿ ಪೊತ್ತವಗರಿದು ನೇತ್ರಕೆ |
ರವಿಯು ನಿಜರೂಪವನು ತೋರ್ಪನು ಭಕ್ತಜನರಿಂಗೇ || 10 ||

ಕೇಳು ರಾಜನೆ ಚಂದ್ರನಂತಿಹ | ಮೇಲು ಗ್ರಹವನು ಕಾಣೆ ಸುರರೊಳ್ |
ಪೇಳಲೇನೆವನಿಂದ ಭೂರುಹಕ್ಕೈದೆ ಪೋಷಣೆಯೂ ||
ವ್ಯಾಲಭೂಷಣ ಪಾರ್ವತೀಶನು | ಬಾಲಚಂದ್ರಮನನ್ನು ಜಡೆಯೊಳ್ |
ತಾಳಿ ರಂಜಿಪನವನೆ ಶ್ರೇಷ್ಠನು ಸರ್ವ ಗ್ರಹಗಳಲೀ || 11 ||
ಚಂದ್ರನಲ್ಲಿಯ ಮೆರೆವ ಸುಧೆಯನು | ಇಂದ್ರ ಮೊದಲಾದಖಿಳ ದಿತಿಜರು |
ಚಂದದಿಂದಲಿ ಕುಡಿದು ನಿತ್ಯದಲಮರರಾಗಿಹರು ||
ಇಂದುವಲ್ಲವೆ ನಿಶೆಯ ಕಾಂತನು | ಚಂದ್ರನಲ್ಲವೆ ತೇಜರೂಪನು |
ಚಂದ್ರ ಪೂರ್ಣನು ತಾನೆಯಾದನು ದ್ವ್ಯಷ್ಟ ಕಲೆಗಳಲೀ || 12 ||
ಚಂದ್ರನಿಂದಲೆ ಸಕಲ ಪ್ರಾಣಿಗೆ | ಎಂದಿಗಾದರು ಪೀಡೆ ಸುಮನಸ |
ರಿಂದು, ಸೋಮನೆ, ಕಡಲಪುತ್ರನೆ ಪಾಲಿಸೆನ್ನುವರು ||
ಚಂದ್ರನಿಂತೀ ಸುಗುಣಪೂರ್ಣನು | ಚಂದ್ರನಿಂತೀ ಶುಲಭ ದೇವತೆ |
ಯೆಂದು ಪೇಳಿದನಾಗ ಪಂಡಿತ ಮೆರೆವ ಮತ್ತೊಬ್ಬ || 13 ||

ಕ್ರೂರನಲ್ಲಿಯ ಬಿಚ್ಚುಗತ್ತಿಯು | ಧಾರೆಯುಂದದೆ ತೋರ್ಪನೀ ಗ್ರಹ
ಭಾರಿ ಕ್ರೂರನು ಸರ್ವ ಗ್ರಹದೊಳಗೆಧಿಕ ಮಂಗಳನು ||
ತೋರದವನಿಂಗಿತವು ಪರರಿಗೆ | ತೋರಿ ಕರುಣವ ಪೊರೆವ ಭಕ್ತರ |
ತೋರ್ವ ದೇವನು ಅರ್ಕಸಾಲೆಯ ಜಾತಿಯಲ್ಲಿಹನೂ || 14 ||
ಗರ್ವದಿಂದುರೆ ಮೆರೆವ ಮನುಜರ | ಸರ್ವ ಬಗೆಯಲಿ ನಾಶಮಾಳ್ಪನು |
ಉರ್ವಿಸುತನನು ಭಕ್ತಿಯಿಂದಲಿ ಪೂಜೆ ಮಾಳ್ಪರಿಗೇ ||
ಸರ್ವಕಾಲದಿ ಕ್ಷೇಮ ತೋರುತ | ಪಾವನಾಂಗರ ಮಾಡುತಖಿಳರ |
ದೇವನೆನಿಸುತ ಪೊರೆವನೆಂದನು ಜೇರೆ ಪಂಡಿತನೂ || 15 ||

ಬುಧನ ಮಹಿಮೆಯನೋರ್ವ ಪಂಡಿತ | ಮುದದಿಪೇಳ್ದನು ವೈಶ್ಯಜಾತಿಯ |
ಸದಯದೇವನು ವಿಘ್ನನಾಶನು ಭಕ್ತಜನರಿಂಗೇ ||

ಬುಧನ ಕೃಪೆಯುಳ್ಳವರಿಗೆಂದಿಗು । ಒದಗದೈಯಪಜಯವು ನಿರುತದಿ ।
ಬುಧನ ದಯದೊಳು ಸಿದ್ಧಿಗೊಳ್ಳುವು ಸಕಲಕಾರ್ಯಗಳು ‖ 16 ‖
ಬುಧನ ಮಹಿಮೆಯು ತರ್ಕವಾದುದು । ಬುಧನು ಯಾರಿಗು ಹೀನನಾಗನು ।
"ಬುಧನುಸೌಮ್ಯನು" ಯೆನುತಲಮರರು ನಿತ್ಯಪೊಗಳುವರು ‖
ಬುಧನೆ ಪ್ರಾಣಿಯ ಭವದ ಚಿಂತೆಗೆ । ಒದಗಿ ಬರುತಲಿ ದೂರ ಮಾಡುವ ।
ಬುಧನ ಬುದ್ಧಿಯು ತಿಳಿಯಲರಿಯದು ಭೂಮಿಜನರಿಂಗೆ ‖ 17 ‖

ಬಳಿಕಲೈದನೆ ವಿಬುಧನೋರ್ವನು । ತಿಳುಹಿ ಪೇಳ್ದನು ಗುರುಚರಿತ್ರವ ।
"ತಿಳಿಯದವನಿಂಗಿತವು ನರರಿಗೆ ದೇವದೈತ್ಯರಿಗೇ" ‖
ಕಲಿತರಮರರು ವಿದ್ಯೆಯವನೊಳು । ಬೆಳೆದು ರಾಜ್ಯವನಾಳಿ ಕೃಪೆಯೊಳು ।
ಬೆಳಗುತಿಹರಾ ಗುರುವಿನಿಂದಲಿ ಸ್ವರ್ಗಸುಖದಲ್ಲಿ ‖ 18 ‖
ಗುರುವರನ ನೆನೆಯುತ್ತಲಿರ್ಪಗೆ । ನಿರುತ ಸಂಸಾರದಲಿಯೊದಗುವ ।
ಭರದ ದುಃಖಾಸ್ಪದದ ಕಾರಣವೆಲ್ಲ ಗೆಲ್ಲುವನು ‖
ಗುರುವಿನಂಘ್ರಿಯ ನೆನೆವ ಮನುಜಗೆ । ಬರದು ತಾಪತ್ರಯವು ನಿತ್ಯದಿ ।
ಗುರುವು ಶಂಕರ ಭಕ್ತಶ್ರೇಷ್ಠನು ಮಂತ್ರಿಪದದಿಂದ ‖ 19 ‖

ಕವಿಗಳೈವರು ಪೇಳ್ದನಂತರ । ತವಕದಿಂ ಮತ್ತೊರ್ವನೇಳುತ ।
ದಿವಿಜರರಿಗಳ ಗುರುಚರಿತ್ರವ ಪೇಳಲನುಗೆಯ್ದಾ ‖
ಇವಗೆ ಲೋಕದಿ ಶುಕ್ರನೆಂಬರು । ಇವಗೆ ಶೋಭಿಪುದೊಂದೆ ನಯನವು ।
ಇವನ ಪೂಜೆಯ ಮಾಳ್ಪ ಜನರಿಗೆ ಶೌರ್ಯಕೆಣೆ ಇಲ್ಲಾ ‖ 20 ‖
ಶುಕ್ರದೇವನು ಅದಿತಿ ಸುತರಿಗೆ । ಅಕ್ಕರಿಂದಲಿ ವಿದ್ಯೆಪೇಳುತ ।
ಚಿಕ್ಕಬಾಲರ ತೆರದಿ ಭಕ್ತರ ಬಿಡದೆ ಸಲಹುವನು ‖
ಶುಕ್ರದೇಹವು ಹಿಮದ ಶುಭ್ರಕೆ । ತಕ್ಕುದಾಗಿರ್ಪದರ ದೆಶೆಯಿಂ ।
ಶುಕ್ರದೇವನು ಮಿಗಿಲು ತೋರ್ಪನು ಸರ್ವ ಗ್ರಹಗಳಲೀ ‖ 21 ‖

"ಕೇಳು ರಾಜನೆ ಶನಿಮಹಾತ್ಮನು । ಮೇಲೆ ತೋರುವ ಸೂರ್ಯದೇವಗೆ ।
ಬಾಲ ರೂಪದಿ ಜನಿಸಿ ಬೆಳೆದನು ಛಾಯೆಗರ್ಭದಲೀ ‖
ಲೋಲ ಲೋಚನ ಮಂದಮೂರುತಿ । ಕಾಲಕಳೆಯುತಲುಗ್ರ ತಪದೊಳು ।
ಮೇಲು ಮೇಲೆಂಬಂತೆ ವರಗಳ ಪಡೆದು ಗ್ರಹಗಳಲೀ ‖ 22 ‖

ಸೇರಿಕೊಳ್ಳುತೆ ಭಕ್ತಜನರಿಗೆ | ಕಾರಣಾತ್ಮಕನಾಗಿ ಪೊರೆಯುವ |
ಧೀರ ಶ್ರೀಶನಿರಾಯ ಚರಿತವನೇನು ಪೇಳುವೆನೂ ||
ಮೀರಿ ನಡೆದರೆಯುಗ್ರಶಾಸನ | ತೋರಿ ಗರ್ವವ ಕಳೆದು ಭಕ್ತರ |
ಪಾರುಗಾಣಿಸುತಿರ್ಪನೆಂದನು'' ಚೇರಿ ಪಂಡಿತನೂ || 23 ||
ಇಂತು ಗ್ರಹಗಳ ಮಹಿಮೆಯನುತಾ | ನಿಂತು ಬಿಡದಲೆ ಕೇಳುತಾನೃಪ |
ಚಿಂತೆಯಿಂದಲಿ ''ಮತ್ತೆ ಯುಳಿದಿಹ ಗ್ರಹದ ಚರಿತವನು |
ಶಾಂತಮನದಲಿ ಕೇಳಿಕೊಳ್ಳುವೆ | ಪಿಂತಿನಂತೆಯೆ ಬೆದರದೆನ್ನೊಳು |
ಶಾಂತ ಮನದೊಳು ಪೇಳಬೇಕೆನಲಿದ್ದ ಮತ್ತೋರ್ವ || 24 ||
ರಾಹುವೆಂಬನು ಶೂರ ಗ್ರಹವೈ | ದೇಹಕಾದರು ಸುಖವನೀಡನು |
ರಾಹು ಚಂದ್ರಮನನ್ನು ಪಿಡಿಯುತ ಬಾಧೆಗೆಯ್ಯುವನು ||
ರಾಹು ಗ್ರಹವನ್ನುತಿಪ ಜನರಿಗೆ | ರಾಹು ಕಷ್ಟವ ಕಡಿಮೆ ಮಾಳ್ಪನು |
ರಾಹು ತನ್ನನು ಮರೆತುಬಿಟ್ಟರೆ ಕೇಡು ತಪ್ಪಿಸನೂ || 25 ||

ಕೇತು ಗ್ರಹವೈ ಕ್ರೂರನಾಗಿಹ | ಕೇತು ರಾಹುವಿನಂತೆ ಶ್ರೇಷ್ಠನು |
ಕೇತು ಸೂರ್ಯನ ಪಿಡಿದು ಲೋಕಗೆ ತಮನ ನೀಡುವನೂ ||
ಕೇತು ಗ್ರಹವಂ ಪೂಜೆಗೆಯ್ಯಲು | ಪ್ರೀತಿ ಭಕ್ತರ ಕಷ್ಟ ಕಳೆವನು |
ಕೇತು ಗ್ರಹವನೆ ಮರೆತ ಜನರಿಗೆ ಕೇಡು ತಪ್ಪಿಸನೂ || 26 ||

ಚರಿತ್ರ ಪ್ರಾರಂಭವು.

ಬಳಿಕಲಾ ಮತ್ತೋರ್ವ ವಿಬುಧನು | ಚಲುವ ಶ್ರೀ ಶನಿರಾಯ ಚರಿತವ |
ಕಲಿತ ವಿದ್ಯೆದಿ ಭಕ್ತಿಯಿಂದಲಿ ಪೇಳಲನುವಾದ ||
ತಿಳಿಯೊ ರಾಜನೆ ಶನಿಯು ಗಾಣಿಗ|ತಿಳಿಯಲರಿಯದು ಶನಿಯಮಹಿಮೆಯು |
ಬಳಲುತಿಹವೈ ದೇವ ದಿತಿಜರು ಶನಿಯ ಮರೆಯುತಲೀ || 27 ||
ಅವನ ಕೋಪಕೆ ಯಾರು ನಿಲ್ವರು? | ಅವನ ರಣಕೆಂತರಿಯ ಬಾಳ್ವಿಕೆ? |
ಅವನ ಸ್ತುತಿಗೆಲ್ಲಿಹುದು ಪಾಪವು? ಗ್ರಹದ ಪೀಡನೆಯೂ ||
ಅವನು ಭೈರವನನ್ನು ಪೂಜಿಪ | ನವನೆ ಸರ್ವೇಶ್ವರನು ಗ್ರಹದೊಳು |
ಅವನೆ ಮಂದನು, ಸೂರ್ಯಪುತ್ರನು ಶ್ರೀ ಶನೈಶ್ವರನು || 28 ||

ಶನಿಯು ಪುಟ್ಟುತ ರವಿಯು ನೋಡಲು । ತನುವು ರೋಗದಿ ಬೆಂದಿತಕಟಾ ।
ಜನಕನೇರುವ ರಥವ ಸಾಗಿಸ ಅರುಣ ಹೆಳವಾದ ॥
ಇನಿತುನುಲ್ಲದೆ ಪಿತನ ಹಗೆಗಳ । ತನುವಿನೋಳ್ಬಿರಿದೆನಿಪ ನಯನವು ।
ಕ್ಷಣಕೆ ಇಂಗಿದವಕಟ! ದೃಷ್ಟಿಯು ತೆಗೆಯಲೇನಾಯ್ತು ॥ 29 ॥
ನೋಡಿರಾಗಳೆ ಶನಿ ಮಹಾತ್ಮನು । ನೀಡಿದಂತಹ ಕ್ರೂರದೃಷ್ಟಿಯು ।
ದೂಡಿ ತನ್ನಯ ಚಾರು ನೇತ್ರದಿ ಸರ್ವವೀಕ್ಷಿಸಲು ॥
ಬೇಡಿದವರಿಗೆ ತಕ್ಕವರಗಳ । ನೀಡುತಾ ಶನಿರಾಯ ಗೆಯ್ದಿಹ ।
ಮೋಡಿಕಾರರ ಕೃತ್ಯ ಕೇಳುತ ನಕ್ಕನಾ ಭೂಪಾ ॥ 30 ॥
ಸಾಕು ಜನಕಗೆ ಪುತ್ರರಿಂತಹ । ಬೇಕು ಮನುಜಗೆ ಬಂಜಿತನವದು ।
ಕಾಕು ಸುತರಿಂದೇನು ಫಲವೈ? ತನಯನಲ್ಲಿವನೂ ॥
ಲೋಕದಲಿ ಹೆತ್ತವರಿಗಾಗೆಯೆ । ಕಾಕುರಿಪು ತಾನಾಗಿ ಜನಿಸಿದ ।
ಲೋಕ ಸಾಕುವ ದೇವನೇತಕೆ ಇವನ ಪುಟ್ಟಿಸಿದ ॥ 31 ॥
ಎಂದು ವಿಕ್ರಮರಾಜನಾಗಳೆ । ಮಂದಿ ಮಕ್ಕಳ ಸಭೆಯೊಳೆಲ್ಲರ ।
ಮುಂದೆ ನಿಂದಿಸಿ ನಗುವ ಕಾಲಕೆ ಶನಿಯು ಮೈದೋರೀ ॥
ಮಂದಮತಿ ವಿಕ್ರಮನೆ ಕೇಳೈ । ಚಂದದಿಂದಲಿ ರಾಜ್ಯವಾಳೈ ।
ಮುಂದೆ ನಿನ್ನಯ ರಾಶಿಗೈದುವೆ ಮುದದೆ ಮರೆಯೆಂದಾ ॥ 32 ॥
ಶನಿಯು ಖತಿಗಾ ವಿಕ್ರಮಾರ್ಕನು । ತನುವು ಗದಗದ ನಡುಗೆ ರಾಜನು ।
ಘನ ಚರಿತ್ರನ ಚರಣಕೆರಗಲು ನೆಮನಗೊಳ್ಳದಲೇ ॥
ಘನ ಸುಸತ್ವರದಿಂದ ಶ್ರೀ ರವಿ । ತನುಜ ದೇವವಿಮಾನದೊಳ್ ಖತಿ ।
ಮನದೆ ಪಿಡಿಯುತ ಪೋದನಾಗಲೆ ಒದೆದು ವಿಕ್ರಮನ ॥ 33 ॥
"ಆ ಮಹಾದೇವನನಿಗೆ ನಿಂದಿಸಿ । ನಾ, ಮಹಾಪಾತಕಿಯದಾದೆನು ।
ಕ್ಷೇಮಕಾಲವು ತೋರದಕಟಾ ಪಾಪಿ ವಿಕ್ರಮಗೆ ॥
ನೇಮವಾವುದು? ಶನಿಯ ಪೂಜೆಗೆ ? । ಕ್ಷೇಮತೋರುವ ಬಗೆಯ ಪೇಳಿರಿ ।
ಪ್ರೇಮಭಾವದೆ ಕೇಳಲವರಿಂತೆಂದರಾ ನೃಪಗೇ ॥ 34 ॥
ರಾಜವಿಕ್ರಮ ಕೇಳು ದೇವನ । ಪೂಜೆಗೆಯ್ಯುವ ತೆರನ ಪೇಳ್ವೆವು ।
ವಾಜಿಪಾದಾಸನದ ಮೂರ್ತಿಯ ನೆಸಗು ಭಕ್ತಿಯಲೀ ॥
ಲಾಜೆ ದೂರ್ವಾಕ್ಷತೆಗಳಿಂ ವರ । ತೇಜಮಾದಾ ರವಿಜ ದೇವಗೆ ।
ಪೂಜೆಗೆಯ್ಯಲು ನಲಿದು ಭಕ್ತರ ಪೊರೆವ ನಿತ್ಯದಲಿ ॥ 35 ॥

ಕ್ಷಾತ್ರ ಧರ್ಮದ ರಾಜನಾಲಿಸು | ಮೂರ್ತಿಪೂಜೆಯ ವಿಧಿಗಳನು ನಾವ್ |
ಪೂರ್ತಿಯಾಗುರೆ ಪೇಳ್ವೆನೀ ಮೊದಲೌಷಧಿಯ ಮಿಂದೂ ||
ಅರ್ಥಿಯಿಂ ವರ ತೈಲದಿಂದಲಿ | ಮೂರ್ತಿಯಭಿಷೇಚನವ ಗೈಯುತ |
ಕೀರ್ತಿಪಡೆದಾ ಪ್ರತಿಮೆಗಾಸನವೆಸಗು ಮಹೊಗ್ಗಡವಾ || 36 ||
ತಿರುಗಿ ಪೂಗೀ ಫಲವ ಧರಣಿಯ | ಸುರರಿಗರ್ಪಿಸಿ ಜಪವನೆಸಗೈ |
ಪರಮ ಜಪಸಂಖೆಯದು ಇಪ್ಪತ್ಮೂರು ಸಾವಿರದ ||
ಹರುಷದಿಂದಾ ಜಪವು ತೀರಲು | ವರದ ನಾಲ್ಕನೆ ಭಾಗ ಹೋಮವ |
ಜರಗಿಸುತ್ತಾ ದೇವ ಪ್ರೀತಿಗೆ ದಾನಗೆಯ್ಯುವದೂ || 37 ||
ಬಳಿಕ ಜಪಗೆಯ್ದಿರುವ ಬ್ರಾಹ್ಮಣ | ಬಳಗಕತಿ ಮಿಷ್ಟಾನ್ನ ಭೋಜನ |
ಸಲಿಸುತಿಚ್ಛಾ ಪೂರ್ಣವಾಗುವ ತೆರದೆದಕ್ಷಿಣೆಯಾ ||
ಮಲಿನವಿಲ್ಲದ ಭಕ್ತಿಯಿಂದಲಿ | ಬಲಿದ ದಾನಗಳೈದೆ ನೀಡುತ |
ಚಲುವ ದೇವನ ನಲ್ಮೆಗಳಿಪುದು ಸೌಮ್ಯ ರೂಪದಲೀ || 38 ||
ಮಾತೆ ಬಾಲಕನನ್ನು ತೊಡೆಯಲಿ | ಪ್ರೀತಿಯಲಿ ಕುಳ್ಳಿರಿಸಿಕೊಳ್ಳುತೆ |
ಮಾತನಾಲಿಪ ತೆರದಿ ಪೊರೆಯುವ ಶನಿಯು ಭಕ್ತರನೂ ||
ಖ್ಯಾತ ಕವಿವರ ಪೇಳ್ವ ಪರತರ | ಶ್ರೀ ತಪಾತ್ಮಜ ಕೋಪವಹ್ನಿಯ |
ಭೀತಿಗುಂದುವ ತೆರನ ಕೇಳುತ ರಾಜನಿಂತೆಂದ || 39 ||
ಮಾತೆಯಾತನು, ಬಂಧುವಾತನು, | ಪ್ರೀತಿಪಾಪಿತನಾತ ಬಳಗವು |
ಖ್ಯಾತಮೂರುತಿ ಸರ್ವವಾತನು ಕೋಪಪೊಂದಿರುವ ||
ಯಾತರಾಶೆಯು ನಮಗೆ ಪೇಳುವ | ಮಾತೆಸಾಕದು ನಮ್ಮ ದೈವಕೆ |
ಭೀತಿಯಿಹುದೈ ಅಪ್ಪುದಾಗಲಿ ಮುಂದೆ ರಕ್ಷಿಸಲೀ, || 40 ||
ಮುಂದೆ ನಡೆದಿಹ ಕೃತಿಗಳನ್ನರಿ | ಚಂದದಿಂದಾಲಿಪುದು ಪರತರ |
ಮಂದದೇವನು ವೇಷಧರಿಸುತ ತೇಜಿ ವಿಕ್ರಯಕೆ ||
ಬಂದುದನು ಪುರಜನರು ತಿಳಿಯದೆ | ಬಂದು ಪೇಳ್ದರು "ರಾಜನಾಲಿಸು |
ಬಂದುದೀ ಪುರಕುರುತರಶ್ವವು ನೋಡಲೇಳುವದೂ" || 41 ||
ಚರರ ನುಡಿಗಳ ನಾಲಿಸುತ್ತಲಿ | ನರಕುಲಾಧಿಪನುತ್ಸುಕತೆಯಿಂ |
ಭರದೆ ಬಂದನು ಕುದುರೆಗೊಳ್ಳಲು ಸಚಿವನೊಡಗೊಡಿ ||
ಉರುತರಶ್ವದ ಬೆಲೆಯ ಕೇಳಲು | "ಪರಿಕಿಸಶ್ವದ ಬೆಲೆಯನರಿವುದು |
ಚರರಿಗಾಜ್ಞೆಯ ನೀಡಬಹುದೈ ವಾಜಿ ನಡಿಸಲ್ಕೇ || 42 ||

ಎಂಬ ಮಾತನು ಕೇಳಿ ವಿಕ್ರಮ | ನೆಂಬ ರಾಜನು ತನ್ನ ಸಚಿವಗೆ |
ನಂಬಿ ನೀಡಿದನಾಜ್ಞೆಯನ್ನುರೆ ತೇಜಿ ಚಲಿಸಲ್ಕೇ ||
ನಂಬಿ "ನಿಜ ಹಯವೆಂದು" ಆತನು | ಸಂಭ್ರಮದಿ ವರ ಭೂಪಗೆರುಹಲು |
"ಕಾಂಚಿನೆ'ನ್ನುತ ರಾಜನೇರಿದ ಮೋಸದಶ್ವವನೂ || 43 ||
ಓಡಿತಾಗಳೆ ಭರದಿ ಜನರುರೆ | ನೋಡಿ ನಲಿಯುವ ತೆರದಿ ವರ್ತನೆ |
ಮಾಡಿ "ಲಕ್ಷಣದಶ್ವಕೀಯಿರಿ ಲಕ್ಷವರಹೆಂದೂ" ||
ಆಡಿಸುತ್ತಲಿ ಗಗನ ಮಾರ್ಗದೆ | ಓಡಿತೈ ಶಸಿದೇವ ಮಹಿಮೆಯು ! |
ನೋಡಿರಶ್ವವು ಪವನ ವೇಗದೆ ಪೋಯ್ತು ಕಾನನಕೇ || 44 ||
ವಾಯುವೇಗದ ವಾಜಿಯನ್ನುರೆ | | ಆಯದಲಿ ಬಿಗಿಹಿಡಿವ ಕಾಲಕೆ |
ಮಾಯವಾಯ್ತು ಕಟಶ್ವ ರಾಜನ ಕೆಡಹಿ ವಿಪಿನದಲೀ ||
ಬಾಯಿ ಬಿಡುತಿತ್ತವನಿಪತಿಯನು | ಪಾಯದಿಂದಲಿ ಕಾಣದಾಗಲು |
ನ್ಯಾಯದಿಂದಾ ಹಯದ ಪಾಲಕ ಕೊಂಡನರ್ಥವನೂ || 45 ||
ಇತ್ತರರ್ಥವ ಚಿಂತೆಯಿಂದಲಿ | ಮತ್ತೆ ಭೂಪನ ಹುಡುಕಲಪ್ಪಣೆ |
ಯಿತ್ತು ಕಳುಹಿದರಖಿಲ ದೇಶಕೆ ಬೆಂದು ಬೆಂಡಾಗೀ ||
"ಎತ್ತ ಪೋದನೊ ಕುದುರೆ ಸಹಿತಾ | ಮತ್ತೆ ಬಪ್ಪನೊ? ಬಾರನೆನುತಾ |
ಚಿತ್ತದಖಿಳರು ಎಣಿಕೆಗೊಂಡರು ತಿಳಿಯದಾಯ್ತೆಂದೂ" || 46 ||
ತಿರುತಿರುಗಿ ಹಂಬಲಿಸಿ ನಿಶಿಯೊಳು | ಹರಳು ಕಲ್ಲನು ತುಳಿದು ಮುಳ್ಳನು |
ಮರಗಳನ್ನುರೆ ಹಾಯುತಡವಿಯು ಪೊಕ್ಕನವನಿಪನೂ ||
ಪರಮ ದೇವನ ಮಹಿಮೆಯಿಂದಾ | ಉರುತರಶ್ವವು ಪೋದುದಕಟಾ? |
ಪುರವಜನಚಿಂತಿಪರೊ? ಪಟ್ಟದ ರಾಣಿ ಹೇಗಿಪಳೋ || 47 ||
ಎಂದು ಪರಿಪರಿ ಹಲುಬಿ ವಿಪಿನದಿ | ಮುಂದಿ ಮಕ್ಕಳನಗಲದರಸನು |
ಬೆಂದು ದುಃಖಿತನಾಗಿ ಮರುಗಿದ ಮರುಳರೋಲ್ಬಿಡದೇ ||
ಮುಂದೆ ಕೆಲಪೊತ್ತಾದ ಕೂಡಲೆ | ಮಂದಪಿತ ಭವದೂರ ರವಿ ತಾ |
ಚಂದದಿಂದುದಯಾದ್ರಿ ಸಿಂಗರಿಸುತ್ತ ಹೊರಹೊರಟಾ || 48 ||
ತಾಮರಸ ಬಾಂಧವನು ಬರುತಿರೆ | ತಾಮಸವು ತಾ ಪೋಗಿ ದೇಶಕೆ |
[illegible] ಕಿರಣ ಪಸರಿಸಿ ಸಕಲಕಿಷ್ಟವಾಯ್ತು ||
ಕ್ಷೇಮಕಾಲವು ಬಂದಿತೆನ್ನುತ | ಪ್ರೇಮದೊಳು ದಿನಪತಿಗೆ ವಂದಿಸಿ |
ತಾಮಲಿಂದಾ ಪುರದ ಮಾರ್ಗವ ಕಂಡು ನಡೆತಂದಾ || 49 ||

ಪುರದಳೋರ್ವತಿ ಧನಿಕ ವೈಶ್ಯನು | ಇರಲು ರಾಜನು ವಿಪಿನದಿಂದೈ |
ತರುತ ಸೇರಿದ ವೈಶ್ಯಗೃಹವನು ಪರಮತೋಷದಲೀ ||
ಬರಲು ವೈಶ್ಯಗೆ ದಿನದಕಿಂತಲು | ಇರದಲಿಮ್ಮಡಿ ಹಣವು ಬಂದುದು |
ಪರಮ ಪ್ರೇಮದಿ ನೋಡಿ ನಲಿದನು ಭೂಪನಡಿಗುಣವ || 50 ||
ಬನ್ನಿರೀಳಿರಿ ಮುಖವ ತೊಳೆಯಿರಿ | ಇನ್ನು ತಮ್ಮಭಿಧಾನ ಪೇಳಿರಿ |
ಮುನ್ನ ರಾಜ್ಯವು ದಾವುದೈ ಮಿಗೆ ಕುಲವ ಪೇಳುವದೂ ||
ನನ್ನ ಜಾತಿಯು ವೀರ ಕ್ಷತ್ರಿಯು | ವೆನ್ನ ದೇಶವು ದೂರವಿಹುದೈ |
ಘನ್ನಮಾದೀ ಗೃಹದೊಳರ್ಧಕ್ಷಣವೆ ನಿಲ್ಲುವೆನು || 51 ||
ಎನಲು ಭೂಪನ ವಾಕ್ಯ ಕೇಳುತ | ವಿನಯದಿಂದುಪಚರಿಸಿ ವೈಶ್ಯನು |
ಘನದ ಷಡ್ರಸವಾದ ಗ್ರಾಸವ ಗೆಯ್ಯುತಿಂತೆಂದಾ ||
ದಿನದ ಕರ್ಮವ ಗೆಯ್ಯಬೇಕೈ | ಮನೆಯು ನಿಮ್ಮದೆ ಇಹುದು ದುಗುಡವ |
ಮನದೆ ದೂರಿಡುತೇಳಬಹುದೈ ಸ್ನಾನ ಭೋಜನಕೇ || 52 ||

ಅಂತು ಸಂಧಿ 1 ಕ್ಕೆ ಪದ್ಯಗಳು 52ಕ್ಕಂ ಮಂಗಳಮಸ್ತು.

ಎರಡನೆಯ ಸಂಧಿ ಪ್ರಾರಂಭವು.

ಸೂಚನೆ:— [ಭಾಮಿನಿ ಷಟ್ಪದಿ]

ಚೋರನೆಂಬಾ ನೆವದೆ ಭೂಪನ | ಭಾರಿ ಶಿಕ್ಷಿಸಿ ಕಡೆಗೆ ರಕ್ಷಿಸಿ |
ಧಾರುಣೀಶನ ತನಯಳೆದುರಿಲಿ ರವಿಜ ಮೈದೋರ್ದಾ ||
ಸಿರಿಯ ಕರುಣದಿ ಬಾಳುತಿರುವಾ | ವರದ ವೈಶ್ಯನು ಗೈಯಲಾ ಗ್ರಹ |
ಪರಮ ತೋಷದಲಿದ್ದ ಭೂಧವ ದೇವಗೊಂದಿಸುತ ||
ಪರಿವ ನೀರನೆ ಮಿಂದು ಷಡ್ರಸ | ಭರಿತ ಸುಗ್ರಾಸವನೆ ಗೊಳ್ಳುತೆ |
ಬರಲು ಮೊದದೊಳೆಂದ ಕ್ಷಿತಿಪಗೆ ನಿಮ್ಮ ಕಥೆಯನ್ನೂ || 1 ||
ಮರೆಯದೊಂದೆನಗೈದೆ ಪೇಳುವ | ಕರುಣವಾಗಲು ಬೇಕು ತಾವೀ |
ಪುರಕೆ ಬಂದಿಹ ಕಾರಣಾವುದು? ಪೇಳಬೇಕೆನಲು ||
ಇರದೆ ಚಿನ್ನೈಸುತ್ತ ರಾಜನ | ಇರಿಕೆಯನ್ನರಿ ಕೇಳಿಕೊಳ್ಳುತೆ |
ಪರತರುಲ್ಲಾಸದಲಿ ಯೋಚನೆಗೆಯ್ದು ಮನದೊಳಗೇ || 2 ||
ತನಯಳೋರ್ವಳು ಇಹಳಲೋಲಿಕ | ಳೆನಿಪ ನಾಮದಿ ಚಲ್ವಿಕಾಯದ |
ವನಿತೆ ಮಾರನ ಬಾಣ

ಜನಪ ವಿಕ್ರಮುಗೀವೆನೆನುತಿರೆ । ಮನದೆ ಹಿರಿಹಿರಿ ಹಿಗ್ಗು ತೇಳುತೆ ।
ಘನಸುವೇಗದೆ ಬಂದಳಂಗನೆ ಜನಕನಿದ್ದೆಡೆಗೆ ॥ 3 ॥
ಬರುವ ಪ್ರೀತಿಯ ಮಗಳ ನೋಡುತ । ಕರೆದು "ಮಗಳೇ ದೇವದಯದಿಂ ।
ಧರೆಯ ಕಾಂತನು ಗ್ರಹಕೆ ಬಂದಿಹ ವರಿಸು ಮುದದಿಂದ ॥
ತರಲು ಬೇಡವು ಮನಕೆ ಸಂಶಯ । ವಿರದೆ ಪೋಗುತ ಚರಣಕೆರಗುತ ।
ಕೊರಳಲಂಕರಿಸಿಂದಿನಿರುಳಲಿ ಕುಸುಮ ಹಾರದಲಿ" ॥ 4 ॥
"ಅಹುದು ಪಿತರೇ ಪೇಳಿದಂದದೆ । ಇಹುದು ಸುಂದರ ರೂಪಮಿವರಿಗೆ ।
ಕುಹಕ ಬುದ್ಧಿಯಿದೆಂತು ಮನದೊಳು ಸಂಸ್ಥೆಯಂಗೊಂಡೂ ॥
ಇಹುದೊ? ಇರದೋ? ಎಂಬದನ್ನರಿ । ಸಹನಶೀಲತೆ ಇವರೊಳರಿಯುತ ।
ಲಿಹೆನು ಭಾಷಣಗೆಯ್ಯೆ ಚತುರತೆ ತೋರಲೊರಸುವೆನು ॥ 5 ॥
ಎಂದು ಪಿತಗಾತ್ಮಜಳು ಭಾಷಣ । ದಿಂದ ಮನದತಿ ಹೊಲ್ಲೆಯುಸುರಲು ।
ಬಂದ ರವಿತಾ ಪಶ್ಚಿಮಾಬ್ಧಿಗೆ ತಪ್ಪದೆಂಬಂತೆ ॥
"ಇಂದು ನಿಮ್ಮಾಗಮನದಿಂದಲಿ । ಮಂದಭಾಗ್ಯರು ಪೋಗಿ ವರಸಿರಿ ।
ಯಿಂದ ಪೂರಿತರಾದೆವೇಳ್ಳೆ ಶಯನ ಮಂದಿರಕೆ ॥ 6 ॥
ಚಿತ್ರಪಠದಿಂ ತುಂಬಿಕೊಂಡಿಹ । ಮತ್ತೆ ಗಜಹಯ ರಥಗಳಿಂದೆಸೆ ।
ವುತ್ತಲಿರುತಿಹವೆತ್ತರದ ಸಾಲ್ಭಿತ್ತಿ ಮಹಲಿನಲೀ ॥
ಎತ್ತನೋಡಲು ರನ್ನವೆಳಗನು । ಒತ್ತಿ ನೂಕುವ ಸಾಲದೀವಿಗೆ ॥
ಎತ್ತನೋಡಲು ಪಕ್ಷಿಸಂಕುಲ ಚಿತ್ರಮೆಸೆದತ್ತು ॥ 7 ॥
ಚಂದದಿಂದವನೆಲ್ಲ ನೋಡುತ । ಮುಂದೆ ಪೋಗಲು ರನ್ನಮಂಚವ ।
ದೊಂದು ಶೋಭಿಪುದಲರ ಪಾಸಿಗೆಯಿಂದ ವೈಭವದೀ ॥
ಕಂದೆರೆದು ಮೇಲ್ಗಡೆಗೆ ನೋಡಲು । ಚಂದಮಾದಾ ಮುತ್ತಿನಿಂ ಪರಿ ।
ಯಂದಗೊಳಿಸುವ ಸರವನೊಂದನು ಕಂಡನಾ ಭೂಪ ॥ 8 ॥
ಧರೆಯ ಕಾಂತನು ಸಕಲ ನೋಡುತ । ಪಿರಿದು ಬೆರಗಾಗುತ್ತ ಮನದಲಿ ।
"ಬರಲಿ ದುಃಖದ ನಿಧಿಯ ಸೂಚನೆಯೆಂದು ಯೋಚಿಸುತ ॥
ಸಿರಿಯ ಕಾಂತಾತ್ಮಜನು ಬರೆದಿಹ । ಬರಹವಿದ್ದಂತಪ್ಪುದಲ್ಲದೆ ।
ನರರ ಪಾಡೇನಮರ ಕಿನ್ನರರನ್ನು ಕಾಡಿಹುದು ॥ 9 ॥
ಎಂದು ಚಿಂತಿಸಿ ಪಲವು ತೆರದಿಂ । ಮಂದದೇವನ ಚೇಷ್ಟೆಯಲ್ಲದೆ ।
ಯೊಂದು ಕಾಣೆನು ತಕ್ಕ ಸಮಯೋಚಿತನ ನಾನೀಗ ॥

ಬಂದು ಮಂಚದ ಮೇಲೆ ಧೈರ್ಯದಿ | ಮಂದದೇವನ ಸ್ಮರಿಸುತೊರಗುತ |
ಲಂದವನಾದುಪ್ಪರಣೆಯಿಂದಾ ಪಾದಮಸ್ತಕವ ‖ 10 ‖
ಇರದೆ ಪೊರುತಾ ನಿದ್ರೆಯಿಲ್ಲದೆ | ಪರನು ಯೋಚನೆ ಗೆಯ್ಯುವಾಗಲೆ |
ಭರದೆ ಬಂದಳು ವೈಶ್ಯನಾತ್ಮಜೆ ವಿಭವದೊಡಗೂಡಿ ‖
ಸಿರಿಯು ಪೂರಿತ ದೇಹಕಾಂತಿಯು | ನಿರದೆ ಕೊರಳೊಳಗಿರ್ಪ ರನ್ನದ |
ಪರಮತೇಜಗಳೆರಡು ಕೂಡುತ ಗ್ರಹವ ಬೆಳಗಿಹವೂ ‖ 11 ‖
ಕನಕಪುತ್ಥಳಿ ದಿವ್ಯಸುಂದರಿ | ಮನದಿ ಜನಿಸಿದ ಮಾರತಾಪಕೆ |
ತನುವನೊಡ್ಡದೆ ಬಂದಳಲ್ಲಿಗೆ ಪರಿಮಳಾಭರಿತೇ ‖
ಇನನೆ ಬಂದನೊ ಶಯ್ಯಮಂದಿರ | ಕೆನುವ ತೆರದಿಂ ದಿವ್ಯ ವೈಶ್ಯನ |
ತನುಜೆ ಬಂದಳು ಮಾರನಂಗನೆ ಬಂದ ತೆರದಿಂದ ‖ 12 ‖
ಬಂದು ಪರಮೋಲ್ಲಾಸ ತೋರುವ | ಚಂದದಾರತಿ ಪಿಡಿದು ಬೆಡಗಿನ |
ಮಂದಗಮನೆಯು ನಿಂದಳರಘಳಿಗೇಳಬೇಕೆನುತ ‖
"ನಿಂದರವನಿಪ ನೇಳಬಲ್ಲನೆ ? | ಬಂದು ಮುತ್ತಿಹುದಿವಗೆ ನಿದ್ರೆಯು" |
ಎಂದು ಕುಸುಮದೆ ಚಂದನೋದಕ ಪೊಯ್ದುಳೆಬ್ಬಿಸಲು ‖ 13 ‖
ರಾಜನೇಳಲು ಪಲವು ತೆರದಿಂ | ರಾಜಮುಖಿ ತಾ ಯತ್ನಗೆಯ್ಯುವ |
ಸೋಜಿಗವ ತಾ ನೋಡುತರಸನು ಮೌನದೊರಗಿರ್ದ ‖
ನೈಜದಿಂದಲಿ ಕೊರಳ ಹಾರಃ | ರಾಜನೆಡೆಯೊಳು ತವಕದಿರಿಸುತ |
ಆ ಜಗನ್ಮೋಹಿನಿಯು ಮಲಗಿದಳರಸನಾಸನದೀ ‖ 14 ‖
ಮುಂದೆ ಗತಿಸಲು ಕೆಲವು ಕಾಲವು | ಮಂದಗಮನೆಗೆ ಭರದಿ ನಿದ್ರೆಯು |
ಬಂದು ಮುಸುಕಿತು ಬಳಿಕ ಕೇಳಿರಿ ನಡೆದ ಸೋಜಿಗವ ‖
ಮಂದದೇವನ ಮಹಿಮೆ ಯಾರಿಗು | ಮೆಂದಿಗೆಂದಿಗು ತಿಳಿಯಲರಿಯದು |
ಒಂದು ಚಿತ್ರದ ಹಂಸಪಕ್ಷಿಯು ಜೀವದಂಚೆಯೊಲು ‖ 15 ‖
ಮಾಡಿ ಕೃತಿಯನು ಮೆಲ್ಲ ಮೆಲ್ಲನೆ | ಗೋಡೆಬಿಟ್ಟೆಳಿದಲ್ಲಿಗೈದುವ |
ಗಾಢವುರೆ ಪ್ರತ್ಯಕ್ಷ ನೋಡಿದ ರಾಜ ಬೆರಗಾಗೀ ‖
ಓಡಿ ಬರುತಾ ಮುತ್ತಿನೆಳೆಯನು | ನೋಡ ನೋಡುತ್ತಿರಲು ಭಕ್ಷಿಸಿ |
ಗೋಡೆಯೇರುತ ಕುಳಿತುಕೊಂಡಿತು ಬಣ್ಣದಂಚೆಯೊಲು ‖ 16 ‖
ನೋಡಿದಚ್ಚರಿಯನ್ನು ಜನರೊಳು | ಆಡಲಾರದೊಲಾಯ್ತು ಯಕಟಾ! |
ಬೇಡಿಕೊಂಡರೆ ಕೊಡದು ಮುತ್ತಿನ ಸರವನಾ ಹಂಸ ‖

ಕಾಡು ವೇಳೆಯು ಬರಲು ಬಹುದೈ । ನಾಡಿಗೇ ಸುಖದಾತ ವಿಕ್ರಮ ।
ನಾಡಿಕೊಂಬರು ಶಳೆದು ಕಾರ್ಯಕೆ ದೈವಕೆಣೆಯಾರು? ॥ 17 ॥
ಇಂತು ವಿಕ್ರಮ ಬಹಳ ತೆರದಿಂ । ಚಿಂತೆಗೆಯ್ಯುತ ಲಂದಿನಿರುಳನು ।
ಕಂತುರಾಣಿಯು ನಗುವ ಬಾಲೆಯು ಮಂಚದಲಿ ಯೊರಗೀ ॥
ಶಾಂತತೆಯು ನುಳಿದಿರಲು ಮೂಡಣ । ದಿಂತು ರವಿ ಯುದ್ಭವಿಸಿದನು ಶನಿ ।
ಇಂತು ಪಿಡಿದನೆ? ದುಃಖಗೊಂಡವ ಭೂಪಗೆಂಬಂತೇ ॥ 18 ॥
ಅನಿತರೊಳಗಾ ತರುಳೆಯೇಳುತ । ಜನಕನೆಡೆಯೊಳ್ವಿಕ್ರಮೆರೆಯನ ।
ಗುಣವ ಬಣ್ಣಿಸಿ ನಕ್ಕು ಪೇಳ್ದಳು ಸರವು ಪೋಯ್ತೆಂದೂ ॥
ಕನಲಿ ವೈಶ್ಯನು ಕೋಪದಿಂದಾ । ಮನುಜರಿಂಗಿತ್ತಾಜ್ಞೆ ಇವನನು ।
ಹಣಿದು ಮುತ್ತಿನ ಹಾರಕೊಳ್ಳಿರಿ ಚೋರ ನಿರುತಿಹನೂ ॥ 19 ॥
ಎಂದ ಮಾತನು ಕೇಳುತನಿತಕೆ । ಬಂದಿತಕಟಾ ಸೇವಕಾಳಿಯು ।
ಬಂಧನಂಗಳ ಗೆಯ್ದು ತಂದರು ಧನಿಕನಿದ್ದೆಡೆಗೇ ॥
"ಮುಂದನಾಟವು ತಿಳಿಯದಾದುದು । ಎಂದು ಕಾಣದ ಶಿಕ್ಷೆಯನ್ನನು ।
ಪೊಂದಬೇಕಾಯ್ತವನಿಪಾಲಕ ಶಿವಶಿವಾಯೆಂದಾ" ॥ 20 ॥
ಧನಿಕ ಪೇಳ್ದನು ದಾಸಜನರಿಗೆ । "ಕನಿಕರಂಗಳ ತೋರಬೇಡಿರಿ ।
ಹಣಿದು ನಮ್ಮಯ ಸರವ ಕೊಳ್ಳಿರಿ ಯಲಸಗೆಯ್ಯದಲೇ" ॥
ಎನಲು ಭೂಪನ ಬಿಗಿದು ಕಟ್ಟುತ । ದಣಿವ ತೆರದಿಂ ಬಿಡದೆ ಪೊಯ್ಯಲು ।
"ಶನಿಯೆ, ಧನಿಕನ ರೂಪ ಧರಿಸುತ ಸಿಟ್ಟು ತೋರಿಸಿದ್ಯಾ! ॥ 21 ॥
ಕೇಳ್ವುದೆಲ್ಲಾ ಜನರು ತನ್ನಯ । ಪೇಳುವಂತಹ ನಿಜದ ವಾರ್ತೆಯ ।
ಬಾಳಲಾರೆನು ದೇಹಧರಿಸುತ ನುಗ್ಗು ನುಸಿಯಾದೇ ॥
ಕಳ್ಳನಂದದೆ ಪೊಡೆಯುತಿರ್ಪಿರಿ । ಯೆಳ್ಳುಕಾಳಷ್ಟೆನ್ನ ಭಾಷೆಯು ।
ಸುಳ್ಳದಿಲ್ಲವು ನಿಮ್ಮ ಹಾರವ ಕೊಳ್ಳೆನಿಶ್ಚಯವೂ" ॥ 22 ॥
ಒರಲುತಿರುವಾ ಚೋರಶ್ರೇಷ್ಠನ । ಧೊರೆಯು ಬಳಿಗೊಯ್ಯುವೆನು ಬಿಡಿರೈ ।
ಪರಮ ಸಾಹಸವೇಕೆ? ತೆಗೆಯಿರಿ ರಜ್ಜು ಬಂಧಿಸುತ ॥
ಇರುವನೋರ್ವನು ಚಂದ್ರಸೇನನು । ಧೊರೆಯುದಾರನು ನಿಷ್ಠೆವಂತನು ।
ಕರುಣ ಹೃದಯನು ಪರರ ದುಃಖವ ನೋಡದವನಿಪನೂ ॥ 23 ॥
ಇನಿತು ಸುಗುಣಗಳಿಂದ ಶೋಭಿಪ । ಜನಪನೆಡೆಗಾ ವೈಶ್ಯ ಬರುತಿರೆ ।
ಶನಿಯ ಮಹಿಮೆಯು ಬಲವು ನೆಲೆಗೊಂಡಿರ್ಪುದರಸಂಗೇ ॥

ಕನಿಕರೆಳ್ಳನಿತಾದರಿಲ್ಲದೆ | ಮನಕೆ ಬಂದುದೆಯಾಜ್ಞೆಯಾಯಿತು |
"ಧನಿಕ ಸರವಂ ಕದ್ದ ಚೋರನ ವಿಪಿನ ಕಟ್ಟುತಲೀ || 24 ||
ಕರೆಸಿ ಘಾತಕಿಗಳನು ಬೇಗನೆ | ಇರದೆ ಚೋರನ ಪಾದ ಕರಗಳ |
ಭರದೆ ಕತ್ತರಿಸುತ್ತ ಕುರುಹನೆ ತಂದು ತೋರೆಂದು" ||
ಕರುಣವಿಲ್ಲದೆ ಭೂಪನೀತೆರ | ದುರಿದು ಬಿದ್ದಡೆ, ದೇವ ಮುಳಿದಡೆ |
ಕರುಣದಿಂದಲಿ ಕಾವರಾರೈ? ಲೋಕ ಮೂರರಲೀ || 25 ||
ಭೂಪನಾಜ್ಞೆಯ ಪೊಂದಿದಂತಹ | ಪಾಪಿ ಪಶುಘಾತಕಿಗೆಳಾಗೆಲೆ |
ಭೂಪ ವಿಕ್ರಮ ಪಾದಕರಗಳ ಬಿಡದೆ ಕತ್ತರಿಸೀ ||
ತಾಪಪಡುವಾ ವಿಕ್ರಮರುವಿಕೆ | ಪಾಪಿಯರಸನ ಬಳಿಯೊಳುಸರಲು |
ಭೂಪ ಮನ್ನಣೆಯಿತ್ತು ಕಳುಹಿದ ಘೋರರೂಪಿಗಳ || 26 ||
ಹರಣ ನಿಲ್ಲಲು ಬಹುದೆ? ಪೇಳ್ವೆ | ದೊರೆಯು ಕರ-ಪಾದಗಳ ಕಡತದ |
ಉರುಪಿನಿಂದವನಸುವ ಪಿಡಿಯಲು ದಕ್ಷನಾದಪನೇ ||
ಮರಳಿಯುಪವಾಸದಲಿ ಬೈಲೊಳು | ಸುರಿವ ದಿನಮಣಿಯುಗ್ರಕಿರಣದೆ |
ನರರು ಬಾಳ್ವರೆ? ಪೇಳು ರಾಜನೆ ಇನಿತು ಮುನಿದಪರೇ? || 27 ||
ಇತ್ತ ವಿಪಿನದೆ ದುಃಖದಿಂದುರೆ | ಚಿತ್ತದೊಳ್ಬೆಂದಕಟ ದೇವನೆ |
ಸತ್ತುಪೋದರೆಯೊಳ್ಳಿತಾದುದು ಹರಣಕೊಳ್ಳಯ್ಯಾ ||
ಘುತ್ತವಿಕ್ರಮನೊಯ್ಯಲೆನುತಲಿ | ಯೊತ್ತಿನೂಕುವ ದುಚತವೇನ್ನೈ? |
ಚಿತ್ತ ಪಲ್ಲಟಮಾದುದಕಟಾ! ಸಾಕು ಸಂಸಾರ || 28 ||
"ಇಂದು ಘಟಿಸಿದಪಾರ ಬವಣೆಯ | ಮಂದದೇವನೆ ತಂದು ತೋರ್ದನು |
ಮುಂದೆ ಲೋಕದೆ ಬಾಳ್ವರೆಲ್ಲರು ಮೇಕಚಿತ್ತದಲೀ ||
ಬಂದ ಭವಕಂಜದಲೆ ಭಕುತಿಲಿ | ಮಂದದೇವನ ಪೂಜೆಗೆಯ್ಯುತ |
ಲಂದತೋರುವ ವರವ ಪಡೆಯಲು ಪೊಂದರತಿಭವನ || 29 ||
ಇನಿತು ಪರತರ ಭಕ್ತಿಯಿಂದಲಿ | ಶನಿಯು ಪೊಗಳಲು ಕರುಣಸಾಗರ |
ಮನದೆ ನೊಂದನು "ಇವನ ಪೀಡಿಪುದುಚಿತಮಲ್ಲೆಂದು" ||
ಕನಿಕರದೊಳಾ ಚಂದ್ರಸೇನನ | ಮನಕೆ ಪ್ರೇರಣೆ ಗೆಯ್ದು "ದುಃಖಿಗೆ |
ತನುವ ಧರಿಸಲು ಅಶನವೀವುದು ಸ್ವಪರ ಹಸ್ತದಲೀ" || 30 ||
ಇತ್ತಲಾತಗೆ "ಯನ್ನನೀರುಗೆ | ಳಿತ್ತು ಬರಬಹುದೆಂದು" ಶಾಸನ |
ವಿತ್ತಕೂಡಲೆ ಪುರದ ಕರುಣೆಗೆಳ್ಳೈದೆ ನಡೆತಂದು ||

ಉತ್ತಮೋತ್ತಮದನ್ನ ಜಲವನು । ಇತ್ತು ಸಲುಹಿದ ರಕಟ ಪರಿಕರ ।
ವಿತ್ತಪರೆ? ದುಃಖಾಬ್ಧಿಯೊಳ್ಮುಳಗಿರ್ದ ವರುಷೆರಡೂ ॥ 31 ॥
ಅನಿತರೊಳಗಾ ಉಜ್ಜನೀಪುರ । ವನಕ ಶೋಭಿಪುದನ್ಮನಾಲಯು ।
ವಿನಯುನಾಲಯು ತಾವುಲಿಂದಾ ಪುರವು ಶೋಭಿಪುದು ॥
ಇನಿತು ಬಂಧುಗಳುಳ್ಳ ತರುಳೆಯು । ಜನನಿಗ್ರಹದಿಂ ಪೊರಟು ಮಾವನ ।
ಮನೆಗೆ ಬರುತಿಹ ಮಾರ್ಗದೀಪರಿ ಕಂಡಳದ್ಭುತವ ॥ 32 ॥
ಓಡಿಬಂದಳು ಇಳಿದು ರಾಜನ । ನೋಡಿದಳು ಸ್ಥಿತಿಗೆತಿಯು ತಮ್ಮಯು ।
ನಾಡಿನರಸಗೆ ಬರೆದನಿಂತೀ ಬರಹ ಕಮಲಜನೂ? ॥
ಬೇಡಿಕೊಳ್ಳದೆ ದಯುವ ಗೆಯ್ಯುವ । ಜೋಡಿಯುರಸನ ಕಾಣೆಧರೆಯೊಳು
ಖೋಡಿ ತಾ ದುರ್ದೈವ ವೀತನದೆಂದು ಕಾಲ್ಗೆರಗೀ ॥ 33 ॥
ವಿನಯುಪೂರಿತ ಭಕ್ತಿರಸದಿಂ । ಮನದೆ ಬಾಗುತ ಬೇಡಿಕೊಂಡಳು ।
"ಇನಿತು ಕಷ್ಟವು ಏಕೆ ಬಂದಿತು ಲೋಕರಕ್ಷಿಪಗೇ" ॥
ಎನುತಲಂಗನೆ ದುಃಖದಿಂ ಕಂ । ಬನಿಯು ಸುರಿಸುತ ಕರುಣ ಸಾಗರ ।
ಕನಕ ತೇಜೋಮುಯುದಿ ರಂಜಿಪ ಭೂಪಗೆರಗಿದಳು ॥ 34 ॥
ಏಳು ತಾಯಿಯೆ ಬೇಗದಿಂದಲಿ । ಬಾಳು ನೀಂ ಪತಿ ಸುತರ ಕೂಡುತ ।
ತಾಳುತಿರು ನೀನಖಿಲ ಭಾಗ್ಯದ ಗೃಹಿಣಿಪಟ್ಟದಲೀ ॥
ಪೇಳಬೇಕೌ ನಿನಗೆ ಕ್ಷೇಮವೆ? । ಬಾಳುತಿಹುದೇ ಸುಖದಿ ರಾಜ್ಯವು? ।
ಕಾಲಕಳೆಯುತಲೆಂದು, ಕೇಳಿದನವನಿಪಾಲಕನು ॥ 35 ॥
ಭೂಧವೇಶ್ವರ ನಿನ್ನ ದಯೆದಲಿ । ಬಾಧೆಯಿಲ್ಲವು ಸಕಲಕ್ಕೈಸಲ ।
ಗಾಧವಾದುದು ನಿನ್ನ ಬಾಳ್ವಿಕೆ ಲೋಕ ಜನರಿಂಗೇ ॥
ಮೇದಿನೀಶನೆ ಪೇಳಬೇಕ್ಕೈ । ಆದುದಾರಿಂದಿನಿತು ಕಷ್ಟವು ? ।
ಹಾದಿಕಾರ್ರರ ತೆರದೆ ಬಿದ್ದಿಹುದೇಕೆ? ಬಹುದಿವಸ ॥ 36
ಎನಲು ಭೂವರ ತನ್ನ ಸ್ಥಿತಿಗೆತಿ । ವಿನುತವಾಗಿಯೇ ಪೇಳ್ದ "ತಾಯಿಯೇ
ಯೆನಗೆ ಪೀಡನೆಯಾಯ್ತು ಗ್ರಹದಾಚಾರ ಮಹಿಮೆಯುಲೀ ॥
ಮನಕೆ ಸೊಗಸಿನ ಕುರುಹ ತಾನದ। ನೆನಿತುಮಾದರು ಕಾಣೆ ಭಯುದೋಳ್
ಕನಿಕರಕ್ಕೆಯು ಪಾತ್ರನಾದೆನು ನಿನ್ನ ಮುಖದಿಂದ ॥ 37
"ಇನಿತು ಕಷ್ಟವದೇಕೆ ಬಡುವಿರಿ? । ಮನೆಗೆ ಬನ್ನಿರಿ ಯನ್ನ ಸಂಗಡ ।
ಘನಸುವೇಗದ ರಥವನೇಳ್ವೆ ಭವಣೆ ಸಾಕಿನ್ನೂ" ॥

ಎನುತಲಂಗನೆ ತಾನು ಮಾವನು । ವಿನುತ ವಿಕ್ರಮನನ್ನು ರಥದೋಳ್ ।
ಮನದಿ ಕುಳ್ಳಿರಿಸುತ್ತ ನಡೆದರು ತಮ್ಮ ಪಟ್ಟಣಕೇ ॥ 38 ॥
ಬಂದ ವಿಕ್ರಮನನ್ನು ಮಾವನು । ಬೆಂದ ಮನದಲಿ ನೋಡಿ ಭಯದೊಳ್ ।
ಅಂದು ನುಡಿದನು ರಾಯನಾಜ್ಞೆಗೆ ಮಿಾರಿದಂತಾಯ್ತು ॥
ಮುಂದೆ ಗತಿಯೇನೆಮಗೆ ಕ್ರೂರರು । ತಂದು ಕರ-ಪದ ಕಡಿದು ಚಲ್ಲಿದ ।
ಅಂದಗೇಡಿಯ ಗ್ರಹದೊಳಿರಿಸಿದ ಕಂಜ ಪೇಳುವರೂ ॥ 39 ॥
ಎಂದು ದುಃಖಿದಿ ಬೆಯ್ಯಲಂಗನೆ । ಬಂದು ಪೇಳ್ದಳು ವಿಕ್ರಮೇಶನು ।
ಬಂದ ಬಳಿಕಾದವುದೆ? ಕಷ್ಟವು ದೇವಭಕ್ತರಿಗೇ ॥
ಎಂದಿಗಾದರು ಕೀರ್ತಿ ಬಪ್ಪುದು । ಬೆಂದು ದುಃಖಿಪ ಕಾರಣೆಲ್ಲವು ।
ಕಂದಿದವರಿಗೆ ತೋಷವಿತ್ತಡೆ ದೇವ ಮನ್ನಿಪನೂ" ॥ 40 ॥
"ಕೇಳು ಮಾವನೆ ಇವರ ಕಥೆಯನು । ಮಾಳವಾವನಿಯನ್ನು ಧರ್ಮದೆ ।
ಪಾಲನೆಯ ತಾ ಗೆಯ್ವ ಭೂಧವ ದುರುಳ ದೈವದಲೀ ॥
ಕಾಲು ಕೈಗಳ ಕಳೆದುಕೊಳ್ಳುತೆ । ಕಾಲಚಕ್ರಕೆ ಸರಿಯು ತೋರುವ ।
ಚಾಲಕ ಶ್ರೀ ಮಂದದೇವನ ಕ್ರೋಧದಿಂದಾಯ್ತು' ॥ 41 ॥
ಎಂದು ಸಂತೈಸುತ್ತ ಬಳಗವ । ನಿಂದು ನಮ್ಮೊಡೆಗೆರಸು ವಿಕ್ರಮ ।
ಬಂದುದಾದುದು ಬಡವರೆಡೆಗಾ ಗಂಗೆ ಬಂದಂತೇ ॥
ಎಂದ ಮಾತನು ಕೇಳಿ ಮಾವನು । ಚಂದ್ರಸೇನನ ಸನಿಯ ಸಾರುತ ।
ನಿಂದು ಕೈಮುಗಿಯುತ್ತ ಬೇಡಿದ "ತಪ್ಪು ಕ್ಷಮಿಸೆಂದೂ" ॥ 42 ॥
ಭೂಪ ಚಿತ್ತಕೆ ತಂದು ಕೃತ್ಯಕೆ । ಕೋಪ ತಾಳೆನು ಎನಲು ಗಾಣಿಗ ।
ತಾಪ ನೀಗುತ ಹರುಷದಿಂದಲಿ ಬಂದನಾಲಯಕೇ ॥
"ಶ್ರೀಪತೀಶನು ವಿಕ್ರಮಾರ್ಕನ । ಪಾಪಕಳೆಯುತ ಪೊರೆದನೈಮೇಣ್ ।
ತಾಪಸುತ ಶನಿದೇವ ಕೃಪೆಯಲಿ ಕಾಯಬೇಕೆಂದಾ" ॥ 43 ॥
ತಪನ ಪುತ್ರನ ದೃಷ್ಟಿಕಿರಣಗ । ಳಪರಿಮಿತ ಪ್ರಖರಂಗೆಳಿಹವೈ ।
ಕುಪಿತ ಸೂರ್ಯನ ತಾಪಸಹಿಸಲ್ಬಹುದು ಮೂಲೋಕ ॥
ಕಪಟಕೃತ್ಯದೆ ಕಾಡುತಿರುವಾ । ಕುಪಿತ ರವಿನಂದನನ ನೇತ್ರದ ।
ಲಪರಿಮಿತ ಕಷ್ಟಂಗಳನ್ನುಕೆ ಪಡೆದು ಬದುಕುವರೇ? ॥ 44 ॥
ಶನಿಯ ಕರುಣದೆ ದಿನದೊಳರಸಗೆ । ಜನಿಸುತಿರ್ದುದು ಗ್ರಾಸವೈಸಲೆ ।
ಮನದೆ ಭಜಿಸುತ್ತೀಶನವರೊಳು ಗಾಣತಿರುಹುವನೂ ॥

ಇನಿಸು ದಿನಗಳ ವರೆಗೆ ವಿಕ್ರಮು | ಘನದರಾಜ್ಯೈಶ್ವರ್ಯ ತಾಳ್ದವ |
ಮನದೆನೊಂದೆತಿ ಪರರ ಸೇವೆಯು ಗೆಯ್ಯಬೇಕಾಯ್ತು ‖ 45 ‖
ಅನಿತರೊಳಗಾ ಸೂರ್ಯಪುತ್ರನ | ಘನದ ವರುಷಗಳೇಳುವರಿಗೆಳು |
ಕನಿಸಿನದ್ಭುತದಂತೆ ಕಷ್ಟವು ಮನಕೆ ಗೋಚರಿಸೇ ‖
ಬಿನದಿ ಅವನಿಪಗಬ್ದಗಳು ತಾವ್ | ಶನಿಯು ದಯದಿಂ ಪೂರ್ಣವಾಗಲು |
ಅನಿತರೊಳಗಾಯ್ತಚ್ಚರೀ ಜಗಕೆಂಬ ತೆರದಿಂದ ‖ 46 ‖
ಮಂದಚರಿತದೊಳಿರ್ಪ ಪರತರ | ಮುಂದಣದ್ಭುತವನ್ನು ನಿಜಮನ |
ದಿಂದ ಕೇಳ್ವುದು ಸಕಲ ಭಕುತರು ಚಿತ್ತವೀಯುತಲೀ ‖
ಎಂದಿನಂದದೆ ವಿಕ್ರಮಾರ್ಕನು | ಚಂದದಿಂದಲೆ ಗಾಣತಿರುಹುತ |
ಸಂಧಿಕಾಲಕೆ ದೀಪರಾಗವ ಗೆಯ್ದು ಸುಸ್ವರದೀ ‖ 47 ‖
ದೀಪ ಪ್ರಜ್ವಲಿಪಂತೆ ರಾಗವ | ಭೂಪ ಗೆಯ್ಯಲು ಪುರದೊಳೆಲ್ಲೆಡೆ |
ದೀಪಮಯವಾಯ್ತಾಗೆ ನೋಡಿರಿ ಪರಮ ಕೌತುಕವ ‖
ಕೋಪವಿಲ್ಲದೆ ಮೇಲೆ ದೇವಗೆ | ಓಪನಲ್ಲದೆ ಪೆರತದೇನ್ಸೈ? |
ದೀಪವೆಳಗಿಂದವನಿಯಲ್ಲಿಯ ರೂಪರಂಜಿಸಿತೂ ‖ 48 ‖
ಮತ್ತೆಕೇಳ್ವದು ಸಕಲ ಜನರಾ | ಪತ್ತಣದ ಶ್ರೀ ವಿಭವದಿಂದಲಿ |
ಉತ್ತಮಾಂಗನೆ ಪದ್ಮಸೇನೆಯು ರೂಪಯೌವನದೀ ‖
ಮತ್ತಳಾಗಿಹಳವಳ ಮಂದಿರ | ವೃತ್ತಸ್ತಂಭದ ಮೇಲೆ ರಂಜಿಪ |
ಕೊತ್ತಳದ ಮೇಲಿಹುದು ದಾಸೀಜನದೆ ಪರಿಬಳಿಸೀ ‖ 49 ‖
ಇರಲು ಈ ಪರಿ ರಾಜಕುವರಿಯು | ಪರಮ ಸಂತೋಷದಲಿ ಕುಳಿತಿರೆ |
ತೆರದವೊಂದೇ ಬಾರಿಗಾಕೆಯು ನಯನ ಬೆಳಕಿಂಗೇ ‖
ಕರೆದು ದಾಸೀ ಜನರನೆಲ್ಲರ | ಪರಕಿಸೈತರಬೇಕಿದುತ್ಸವ |
ಪುರದೊಳೀಕಾಯ್ತೆಂಬ ಕಾರಣವರಿತು ಬೇಗದಲೀ ‖ 50 ‖
ಎಂದು ಭೂಪಾತ್ಮಜೆಯು ಪೇಳಲು | ಚಂದದಸಿಬರು ಪರಿಯುತೆಲ್ಲೆಡೆ |
ಬಂದು ನೋಡಲು ಮೂಲಕಾರಣ ತಿಳಿಯದಾಯ್ತೆಂದೂ ‖
ಅಂದು ಚಿಂತಿಸಿ ಮತ್ತೆ ಶೋಧನೆ | ಯಿಂದ ತಿರುಗುವ ಕಾಲಕಾಗಲೆ |
ಅಂದಗೆಟ್ಟಾ ವಿಕ್ರಮಾರ್ಕನೆ ದೀಪದುತ್ಸವಕೇ ‖ 51 ‖
ಮೂಲಕಾರಣವೆಂದು ತಿಳಿಯುತ | ಬಾಲೆಯರು ತಾವಾಗ ಬೇಗದಿ |
ಪೇಳಬೇಕೆಂದಲ್ಲಿಗೆಯ್ದುತ ಕಂಡು ದೇವಿಯನೂ ‖

"ಕೇಳು ತಾಯಿಯೇ ನಿಮ್ಮ ಪಿತವರ | ಕಾಲುಕೈಗಳ ಕಡಿಸಿ ಚಲ್ಲಿದ್ದ|
ಮೂಲರೂಪನೆ ಗಾನಗೆಯ್ದನು ಗಾಣತಿರುಹುತಲೀ || 52 ||
ಇರಲಿ ನೀವೀಗೆಲ್ಲಿಗೈದುತ | ಕರೆದು ಸನ್ಮಾರ್ಗದಲಿ ಇಲ್ಲಿಗೆ |
ಬರಿಸು ಬೇಗನೆ ಕಾಂತನವನೇ ಮನದಿಯೊರಿಸಿರ್ಪ್ಪೆ ||
ಕರೆದು ತಾರೆಂದಾಜ್ಞೆಗೆಯ್ಯಲು | ಥರಥರನೆ ನಡುಗುತ್ತ ಬಾಲೆಯು |
ರಿರದೆ ಪೇಳ್ದರು "ನಿಮ್ಮ ಪಿತನಿಂಗೊರೆವುದುಚಿತೆಂದೂ" || 53 ||
ಇಸಿತು ದಿವಸಗಳನ್ನು ಕಷ್ಟದೆ | ದಣಿದು ಕಳೆಯುತ್ತಿರುವ ಕಾಲಕೆ |
ಇನಿಯ ನಿನಗೆತ್ತಣದಿ ಬಂದನೊ? ಎಂದು ಕೋಪದಲೀ ||
ಮನಕೆ ಬಂದಿಹ ಕ್ರೂರಶಾಸನ | ಜನಕಮಾಡಲು ಮಾಳ್ಪೆವೇನನು? |
ಘನದ ಕಾರ್ಯಕೆ ನಮ್ಮ ಚಿತ್ತವು ಬರದು ಬಿಡು ತಾಯಿ || 54 ||
ಪೇಳಿಕೊಳ್ಳುತ ಭೂಪಕುವರಿಯು | ಕಾಲಕಳೆಯುವದುಚಿತವಲ್ಲಿದು |
ಫಾಲಬರಹವದೆಂತು ಇರ್ಪುದೊ? ತಿಳಿಯದೆಂದರಿತೂ ||
ಮಾಲೆಪಿಡಿದು ಸುಭಕ್ತಿಯಿಂದಲಿ | ಲೋಲಳಾಗಿಹೆ ಕರೆದು ತನ್ನಿರಿ |
ಪೇಳಲೇನಿದಕೀಗ? ನಿಮಗಾರಿಂದೆ ಭಯವಿಲ್ಲಾ || 55 ||
ಆಗ ದಾಸೀಜನರು ಗಾಣವ | ಬೇಗದಿಂದಲಿ ತಿರುಹುವರಸನ |
ನಾಗಕರೆಯುತ ಬಂದರಾಗಳೆ ತರುಣಿ ಮಂದಿರಕೆ ||
ನಾಗವೇಣಿಯೆ ಕೊಳ್ವುದಿವನನು | ಬೇಗ ಕರೆತಂದಿಹೆವು ಭೂಪನು |
ತೂಗಬೇಕೌ ಶಿರವ ಕಾರ್ಯದಿ ಲೋಕನಲಿವಂತೇ || 56 ||
ಕೊಟ್ಟು ದಾಸೀಜನರಿಗುಚಿತವ | ನಟ್ಟುತವರನು ಬಳಿಕ ರಾಜನ |
ಪುಟ್ಟ ಸುಂದರ ಮುಖವ ನೋಡುತ ಕುಳಿತಳೆದುರಿನಲೀ ||
ಶ್ರೇಷ್ಠಪುರುಷನೆ ಎನ್ನ ಬಿನ್ನಣ | ವಿಷ್ಟುಲಾಲಿಸಿ ದಾಸಿಯೊಳ್‌ದಯ |
ವಿಟ್ಟುರಕ್ಷಿಸಬೇಕು ತಮ್ಮಯ ಗಾನರಸದಿಂದ || 57 ||
ಇಂದುಮುಖಿ ಶಿರಗೊಡ್ಡಿ ಪರಿಪರಿ | ಯಿಂದ ಬೇಡಲು ಭಕ್ತಿಯಿಂದಲಿ|
ಸಂದಕಾಲವು ಬರದು ಮತ್ತಾರಾರಿಗೆಂದೆಂದೂ ||
ಎಂದು ತಿಳಿದಾ ವಿಕ್ರಮಾರ್ಕನು | ಚಂದದೊಳು ಗಂಧರ್ವರಂದದ |
ಲಂದುಪಾಡಿದ ಶನಿಯ ಮಹಿಮೆಯ ಪದವ ರಚಿಸುತ್ತಾ || 58 ||
ಕೇಳಿ ಗಾನವ ಚಂದ್ರಸೇನನು | ಕೇಳಿಕೊಂಡನು ದಾಸಿಯಿಂದಲಿ |
ಬಾಲೆಯಿಂದೇಕಿಷ್ಟು ಗಾನವನೆಸಗಿಕೊಂಡಿಹಳೊ ||

ಪೇಳಿರೆನ್ನಲು ದಾಸಿಯುರು ತಾವ್ | ಪೇಳ್ದರಾಗಲೆ ದೋಷಮಾದುದು |
ಲೋಲಲೋಚನೆಯಿಂದಲಲ್ಲದೆಯಾಗದೆಮ್ಮಿಂದಾ || 59 ||
ಎಂದು ಪೇಳುತ್ತಿರಲು ಭೂಪಗೆ | ಬಂದು ನಿದ್ರಾಂಗನೆಯು ದೃಢತರ |
ದಿಂದ ಮಾಲಿಂಗನವ ಗೆಯ್ದಳು ಇತ್ತ ಮಹಲಿನಲೀ ||
ಒಂದನುಳಿಸದೆ ಪಟ್ಟ ದುಃಖವ | ನಂದುವಿಕ್ರಮು ನೀಲಕುಂತಳೆ |
ಮುಂದೆ ಪೇಳುತ "ಶನಿಯು ತನ್ನನು ಕರುಣ ದೃಷ್ಟಿಯಲಿ" || 60 ||
ಯೆಂದು ನೋಳ್ಪನೊ ತಿಳಿಯದೆನ್ನಯ | ಮುಂದಿಮಕ್ಕಳದೆಂತು? ಪುರದೊಳು |
ಚಂದದಿಂದಲಿ ವಾಸಗೆಯ್ದರೊ? ತಿಳಿಯದಾಯ್ತೆನಗೇ ||
ಎಂದು ಪರಿಪರಿಯಿಂದ ಭೂಪನು | ಮುಂದದೇವನ ಭಜಿಸುತಿರಲಾ |
ಸುಂದರಾಂಗನು ಬಂದನಲ್ಲಿಗೆ ಭಾನುಸಂಜಾತಾ || 61 ||
ಬರಲು ಶ್ರೀಶನಿರಾಯನಲ್ಲಿಗೆ | ಪರಮ ತೇಜೋಮಯುವದಾಯ್ತು |
ಕರುಣದಿಂದಲಿ ದೇವನಲ್ಲಿಗೆ ಬಂದ ಬಳಿಕಿನ್ನೂ ||
ಕೊರತೆಯುಂಟೇ? ವಿಕ್ರಮಾರ್ಕನ | ವರದ ಪುಣ್ಯಕೆ ಸರಿಯದಾವುದು? |
ಧರೆಯ ಜನರಿಗೆ ದೇವದರ್ಶನವೆಂತು ದೊರಕುವದೋ? || 62 ||
ಮಂದಮೂರುತಿಯನ್ನು ವಿಕ್ರಮ | ನೊಂದೆ ಮನದಲಿ ಸ್ತುತ್ಯಗೆಯ್ಯಲು |
ಬಂದನಲ್ಲಿಗೆ ಭಕ್ತನಿಕರಕೆ ವರದನೆಂದೆನಿಸೀ ||
ಮುಂದೆ ನಿಲ್ಲುತ "ವಿಕ್ರಮಾರ್ಕನೆ | ಚಂದದಿಂದಲಿ ನೋಡಿಕೊಳ್ಳೈ |
ಇಂದಿಗಾದರು ತಿಳಿದುದೇನ್ನೈ? ಮಹಿಮೆಯೆಂತಿಹುದೋ!" || 63 ||
ಎಂಬ ಶ್ರೀ ಶನಿದೇವರನು ತಾ | ನಿಂಬು ಬಿಡದಂತಂಗವೆಲ್ಲವ |
ಕಾಂಬೆ ನಿನ್ನಯ ದಿವ್ಯರೂಪವ ತೋರು ಜಗದೊಡೆಯಾ ||
ಇಂಬು ಬಿಡದೀಯುವನಿಯನ್ನೇ | ತುಂಬಿಕೊಂಡಿಹೆ, ಸುರ ನರೋರಗ |
ರೆಂಬ ಬಲ್ಲಿದರೈದೆ ನಿನ್ನನು ಶರಣು ಬರುತಿಹರೂ" || 64 ||
ಎಂದು ಸ್ತುತಿಸುತ ಮೇಲಕೇಳಲ್ | ಕಂದು ಬಾರದೆ ಚರಣ ರಹಿತನು |
ಮುಂದದೇವನ ಪಾದಪದ್ಮಕೆ ನಮಿಸುತುರುಳುತ್ತಾ ||
ಒಂದೆ ಮನದಾನಂದದಿಂದಲಿ | ನಿಂದುಕೊಳ್ಳಲು ದೇವನಲಿಯುತ |
ಲೆಂದನಾಗಲೆ ಭೂಪನಿನ್ನಯ "ಭಕ್ತಿಬಲಿದಿಹುದೂ" || 65 ||
"ಕೇಳುವಿಕ್ರಮ ನಿನ್ನ ಬಯಕೆಯ | ಕಾಲಕಳೆಯದಲಿತ್ತು ಪೊರೆವೆನು |
ನಿಳು ನೀಲಕೆ ಪಾದಕರಗಳು ಬರಲಿ ನಿನಗೀಗಾ ||

ಪೇಳು ಬೇಗದಲಿಷ್ಟ ವರವನು । ಕೇಳಿಕೊಳ್ಳೈ ನಿನ್ನ ಭಕುತಿಗೆ ।
ಪೇಳದನಿತಾನಂದ ಪೊಂದಿದೆಯೆನ್ನ ಮಾನಸವೂ" ॥ 66 ॥
"ಚನ್ನಿಗೇಶನೆ ಮಂದದೇವನೆ, । ಘನ್ನಮಹಿಮನೆ ಭಾನುತನುಜನೆ ।
ಸನ್ನುತಾಂಗನೆ, ಭಕ್ತವತ್ಸಲ, ಭಯನಿವಾರಕನೇ ॥
ಎನ್ನ ಕಾಡಿದ ತೆರದಿ ಮಾನವ । ರನ್ನು ದುಃಖಿಸಬೇಡ ದೇವನೆ ।
ಎನ್ನಿದೊಂದೇ ವರವನೀಯುತ ಸಲಹು ಜಗದೊಡೆಯಾ" ॥ 67 ॥
ಅನ್ನ ಬೇಡೆನು ವಸ್ತ್ರ ಬೇಡೆನು । ಚನ್ನವಾಗಿಹ ರಾಜ್ಯ ಬೇಡೆನು ।
ಘನ್ನತರದೈಶ್ವರ್ಯ ಬೇಡೆನು ಕರುಣ ದೃಷ್ಟಿಯಲೀ ॥
ಎನ್ನ ನೋಡ್ದೈ ದೇವ ದೇವನೆ । ತನ್ನ ತೆರದಿಂದನ್ಯ ಪ್ರಾಣಿಗೆ ।
ಇನ್ನು ಕಷ್ಟದೊಳಿಕ್ಕದೋವುದು ವರವ ನೀಡುತಲೀ ॥ 68 ॥
ರಾಜನಲ್ಲಿಯು ಪರರ ದುಃಖಕೆ । ಮಾಜದಳುಕುವ ಶ್ರೇಷ್ಠ ಗುಣವನು ।
ಶ್ರೀ ಜಗತ್ರಯ ಪೋಷಕಾಗ್ರಣಿ ನೋಡಿ ನಲಿದಾಡೀ ॥ 69 ॥
ಅಂತು ಸಂಧಿ 2 ಕ್ಕೆ ಪದ್ಯಗಳು 121ಕ್ಕಂ ಮಂಗಳಮಸ್ತು.

ಮೂರನೆಯ ಸಂಧಿ ಪ್ರಾರಂಭವು.

ಸೂಚನೆ:— [ಭಾಮಿನಿ ಷಟ್ಪದಿ]

ಧರಣಿಪಾಗ್ರಣಿ ವಿಕ್ರಮಾರ್ಕಗೆ । ಸರಸಿಜಾಪ್ತನ ಸುತನು ಗುರುವಿಗೆ ।
ಕರುಣಮಿಲ್ಲದೆ ಕಾಡಿ ಕಾಯ್ದುದ ಪೇಳ್ದ ಪ್ರೀತಿಯೊಳು ॥
ಕೇಳು ವಿಕ್ರಮ ನಿನ್ನ ತಾಪವ । ಮೇಲೆ ತೋರುವ ದೇವ ಗುರುವಿಗೆ ।
ಕಾಲಕರ್ಮದ ಕೂಡೆ ಕಾಡಿದೆನದಕೆ ಹೋಲಿಸಲು ॥
ಹೋಲದಕಟೆಳ್ಳನಿತು ಮನದಿಂ । ಸೋಲದಿತ್ತೆನು ದುಃಖರಾಶಿಯ ।
ಕಾಲನಂತಕ ಪಾರ್ವತೀಶಗೆ ದೇವ ದಿತಿಜರಿಗೇ ॥ 1 ॥
ಭೂಪ ಕೇಳ್ಳೈ ಸುರರ ವಿದ್ಯದ । ಭೂಪನಡಿದಾವರೆಗೆ ನಮಿಸುತ ।
ಶ್ರೀ ಪರಾತ್ಪರ ಗುರುವೆ ನಿಮ್ಮಯ ರಾಶಿಗೈದುವೆನೂ ॥
ತಾಪವೇಳೂವರಿಯ ವರುಷಕೆ । ಪೋಪುದೆಂದೆನುತೆಲ್ಲ ಬಿನ್ನಿಸೆ ।
ತಾಪಕಂಜುತ ಗುರುವು ನುಡಿದನು ಬರದಿರೆಂದೆಂದೂ ॥ 2 ॥
ನಾಕದೊಡೆಯರು ದೇವಗುರುಗಳು । ಸಾಕುತಿರುವಿರಿ ಸರ್ವ ಜಗವನು ।
ಯಾಕೆ ರಾಶಿಗೆಯೆನ್ನನೊಲ್ಲದೆ ತುಚ್ಛಗೆಯ್ಯುವಿರಿ. ॥

ನೂಕಬೇಡಿರಿ ವರುಷವೈದನು | ಸಾಕಿ ಸಲಹಿರಿ ಎರಡುವರಿಯುಸು |
ಕಾಕು ಕಾಟವೆ ಬೇಡವೆನ್ನುತ ನೊಕಿ ಬಿಡುತಿಹರೇ ‖ 3 ‖
ಘನ್ನ ಗುರುಗಳ್ಗಿತ್ತು ದುಃಖವ | ಮುನ್ನ ಪಾತಕಿಯಾಗಲೀತಕೆ
ಚನ್ನವಾಗಿಯೆ ಲೇಶಕಾಲದೆ ಬಂದು ಪೋಗುವೆನೂ ‖
ಎನ್ನುತಾಗ್ರಹಗೈದು ಬೋಧಿಸಿ | ಸನ್ನುತಾಂಗರ ಚರಣಕೆರಗುತ |
ಲಿನ್ನು ನೋಡಿರಿ ಶನಿಯು ಸಿಂತಿಹ ಬೇಡಿರಿಷ್ಟವನೂ ‖ 4 ‖
ಕೇಳು ಭಾಸ್ಕರಪುತ್ರನೆನ್ನಯ | ಮೇಲೆ ಮಮತೆಯನಿಟ್ಟು ವರಗಳ |
ಕೇಳಿಕೊಳ್ಳಿರಿ ಎಂಬ ಹೃದಯಕೆ ವರವ ಬೇಡುವೆನೂ ‖
ಲೋಲಲೋಚನ ತೆರೆಯುತೆನ್ನಯ | ಮೇಲೆ ಕೃಪೆಯನು ಗೆಯ್ಯಬೇಕೆನೆ |
ಪೇಳ್ದೆನೇಳೂವರಿಯ ಪ್ರಹರಗಳಲ್ಲಿ ಬರುತಿರ್ಪೆ ‖ 5 ‖
ಬೇಡ ಬೇಡೈ ಅನಿತುಕಾಲವು | ನೋಡಬಹುದೈ ಪ್ರಹರವೊಂದನು |
ಕಾಡುವೇಳೆಗೆ ಸ್ನಾನ ಸಂಧ್ಯಾವಂದನೆಸಗುವೆನೂ ‖
ಕಾಡಲೊಪ್ಪಿಗೆಯಿತ್ತು ಪೋದನು | ನೋಡಿರೈ ಗುರು ಕಷ್ಟ ಪಡುತಿಹ |
ಕಾಡುಕಾಲವು ಬಂದಿತಕಟಾ ದೇವಗುರುಗಳ್ಗೆ ‖ 6 ‖
ಹೀಗೆ ಶನಿಯಾಳಿಕೆಯು ಬರುತಿರೆ | ಆಗೆ ಗುರುಗಳು ರೂಪ ಬದಲಿಸಿ |
ಬೇಗದಿಂದಲಿ ಸಾಗಿಪೋದರು ಮೃತ್ಯುಲೋಕಕ್ಕೇ ‖
ಪೋಗಿ ಭುವಿಯೊಳು ಗಂಗೆಯುದಕದೆ | ರಾಗದಿಂದಲಿ ಸ್ನಾನಗೆಯ್ಯುವೆ |
ನೀಗ ಶ್ರೀ ಶನಿರಾಯನಲ್ಲಿಗೆ ಬಾರನೆಂದರಿತೂ ‖ 7 ‖
ಅನಿತರೊಳಗಾ ಭಾನುಪುತ್ರನು | ಮನದೆ ಗುರುಗಳ ಮೋಸವರಿಯುತ |
ಲನಿದು ತೋರುವ ತೆರದಿ ತೊಟ್ಟನು ಯುವನ ವೇಷವನೂ ‖
ಸನಿಯಕೈದುತ್ತ ಕೊಳ್ಳುತಿಹಿರಾ | ಮನದಪೇಕ್ಷೆಯು ತೀರುತಿರ್ಪುದು |
ಎನುತ ಕೊಟ್ಟನು ಎರಡು ಫಲಗಳ ಗುರು ಕರಾಗ್ರದಲೀ ‖ 8 ‖
ಕೊಟ್ಟ ಕರಬೂಜೆಯದ ಫಲಗಳ | ನಿಟ್ಟುಕೊಳ್ಳುತಲಿಂದಿನೋಗರ |
ನೆಟ್ಟಗಾದಿತು ತೆಗೆದುಕೊಳ್ಳೈ ಫಲದ ಕ್ರಯವನ್ನೂ ‖
ಕೊಟ್ಟು ಶನಿರಾಯನಿಗೆ ಹಣವನು | ಅಟ್ಟ ನದಿಯೊಳು ನಿತ್ಯಕರ್ಮವ |
ನಷ್ಟುತೀರಿಸಿಕೊಂಡು ಹೊರಟನು ಪುರವನೀಕ್ಷಿಸಲು ‖ 9 ‖
ಒಂದು ಕರದಲಿ ಗಂಗೆಯುದಕದ | ಲಂದವಾಗಿಹ ತುಂಬಿ ತುಳುಕುವ |
ಚಂದತೋರುವ ಪಾತ್ರೆಪಿಡಿದಿಹ ಬಲದ ಹಸ್ತದಲಿ ‖

ಬಂಧುರತೆಯಿಂ ಕಪಟವೇಷಿಯು | ತಂದುಕೊಟ್ಟಿಹ ಫಲಗಳೆರಡುಗ |
ಳಿಂದ ಶೋಭಿಸ ಜೋಲ್ವಜೋಳಿಗೆ ಪಿಡಿದನೆಡಕರದೀ || 10 ||
ಮುಂದೆ ಬರುತಿರೆ ಗುರುಕಟಾಕ್ಷಕೆ | ಒಂದು ನಗರವು ತೋರಿತ್ಯೆಸಲೆ |
ಮಂದದೇವನ ಚೇಷ್ಟೆಯಿಂಪಲಿ ಆದುದಚ್ಚರಿಯು ||
ಸಿಂದು ಕೇಳಿರಿ ಪುರದ ರಾಜಗೆ | ಅಂದವೊಬ್ಬನೆ ಮಗನು ಸಚಿವಗೆ |
ನಿಂದನೊಬ್ಬನೆ ಸುತನು ತಾವೀ ಬಾಲರೊಂದಾಗಿ || 11 ||
ಭೀತಿಯಿಲ್ಲದೆ ಪುತ್ರರೀರ್ವರು | ಆತುರತ್ವದೆ ಪೋಗಿ ವಿಪಿನದಿ |
ಕಾತುನಿಂತಿಹ ದುಷ್ಟ ವೃಗಗಳ ಮಥಿಸ ಪೊರಮಟ್ಟು ||
ಏತಕಿಲ್ಲಿಗೆ ಬಾರದಿಹರ್‍ಯೆ? | ಪ್ರೀತಿಪುತ್ರರನರಸಿ ಬನ್ನಿರಿ |
ರೀತಿ ತೋರದು ಮಕ್ಕಳಿಲ್ಲದೆ ಮುಕ್ತಿ ದೊರಕುವದೇ || 12 ||
ಭೂಪಸಚಿವರು ಚರರಿಗಾಜ್ಞೆಯು | ತಾಪದಿಂದಲಿ ನೀಡಲಾಕ್ಷಣ |
ಭೂಪಚರರ್‍ಯೆತಂದು ಹೊರಟರು ದಿಕ್ಕುದಿಕ್ಕಿನಲಿ ||
ಕೋಪದಿಂದಲಿ ಪುಡುಕಿ ಸಿಗದಿರೆ | ತಾಪಬಡುತಲಿ ಗಂಗೆತಟದಲಿ |
ಭೂಪಸಚಿವರ ಪುತ್ರರೀಕ್ಷಿಸಲೆಂದು ಬರುತಿರ್ಪಾ || 13 ||
ಚರರು ಕಂಡರು ಶನಿಯು ಜಾಲಕೆ | ಶರದಿ ಬಿದ್ದಿಹ ವೃಗದೊಲಿರುತಿಹ |
ಗುರುವಿನೆಡೆಯಲಿ ಬಸಿವನೆತ್ತರದಿಂದ ಕೂಡಿರುವ ||
ಎರಡು ಮಸ್ತಕವುಳ್ಳ ಜೋಳಿಗೆ | ಕರದಿ ಪಿಡಿದಿದ ಮನುಜನಲ್ಲಿಗೆ |
ಭರದಿ ಬಂದರು ರಾಜದೂತರು ತೋರದೇನೆನುತ || 14 ||
ಎನಲು ಶ್ರೀಗುರು ರಾಜಚರರಿಗೆ | ಘನದ ಕರಬೂಜೆಯದ ಫಲಗಳು |
ಎನಗೆ ಕೊಟ್ಟುದಕಾನೆ ಒಯ್ವೆನು ಇಂದು ಭಕ್ಷಿಸಲು ||
ಎನಲು ಭೃತ್ಯರು ಕೋಪದಿಂದಲಿ | ತನಗೆ ತಾನೇ ಕಾಣುತಿರ್ಪುದು |
ಇನಿತು ರಕ್ತವು ಸೋರುತಿರ್ಪಾ ಶಿರವನೊಯ್ಯುವಿಯಾ? || 15 ||
ನೀನು ವಿಪ್ರನೆ ನಿನಗೆ ತಿಳಿಯದೆ? | ನೀನು ಬಾಲರ ಶಿರವನೇತಕೆ |
ಹೀನರಂದದೆ ಕೊಯ್ದೆಯಕಟಾ ಕರುಣೆಯೆಲ್ಲಿಹುದೋ ||
ಏನು ಘಾತಕವೆಸಗಿದ್ಯೆ ನರ | ಏನು ಪೇಳಲಿ ನಿನ್ನ ಕೃತ್ಯಕೆ |
ನೀನು ನರವೇಷದಲಿ ಬಂದಿಹ ಕ್ರೂರ ರಕ್ಕಸನೇ || 16 ||
ಭೂಪನಲ್ಲಿಗೆ ಪೋಗಿ ಖೂಳನ | ಪಾಪಕೃತ್ಯಗಳರುಪಲಿವನನು |
ಕೋಪದೊಳ್ ದಂಡಿಸಲು ಶಾಸನವೀವನ್ಯೆ ಧೊರೆಯು ||

ಕಲುಷದಿಂದಲಿ ಪುತ್ರನಳಲಿನ | ಭೂಪಮಂತ್ರಿಗಳಿರುವರಕಟಾ |
ತಾಪದೇಳಿಗೆ ಗೆಯ್ದನಿವನೇ ಭೂಸುರಾಧಮನು || 17 ||
ಎನುತ ಗುರುವಿನ ಬಾಹುಮೂಲದಿ | ಘನದಿ ಬಿಗಿದಿಹ ಪಾಶಧರರತಿ |
ತನಯದುಃಖಾಬ್ಧಿಯಲಿ ಮುಳುಗಿದ ರಾಜನೆದುರಿನಲೀ ||
ಕನಿಕರಂಗಳ ತೋರದೆಲ್ಲವು | ಜನಿತನಾಗಿಹ ತೆರದಿ ದುಃಖಿಗ |
ಳಿನಿತು ಮುಸುರುತ ತೋರ್ಪರಕಟಾ ಬಾಲಶಿರಯುಗವಾ || 18 ||
ನೋಡಿ ಧರಣಿಪ ಸಚಿವರೀರ್ವರು | ಪೋಡಿಯಾದುದೆ ನಮ್ಮ ದೈವವು |
ಬೇಡುತಿರ್ದೆವೆ? ಪುತ್ರಮರಣವ ಕೇಳಬೇಕೆನುತ ||
ಬೇಡಬೇಡಲೆ ದೇವ ನಮ್ಮನೆ | ಬೇಡಿಕೊಂಡರೆ ನಲಿದು ಬಹೆವೈ |
ನಾಡನಾಳ್ವುದಕಾರು? ಗತಿಯೈ ಪುಟ್ಟದರ್ಭಕರಾ || 19 ||
ಕೊಂಡು ಪೋದರೆ ಪೇಳಲಾರಿಗೆ | ಬೆಂಡುಮಾಡಿದೆಯಮ್ಮ ಬಳಗವ |
ಕೊಂಡು ಪೋಪರೆ? ದೇವದೇವನೆ ದತ್ತವಸ್ತುಗಳಾ ||
ಚಂದತನದಲಿ ಬಾಲರಸುವನು | ದಂಡಧರ ತಾನೇತಕೊಯ್ದನೊ! |
ಭಂಡತನವಾಯ್ತಕಟ ಶಿವಶಿವಯೆನುತ ಮೂರ್ಛೆಯಲಿ || 20 ||
ಉರುಳುತೇಳುತ ದುಃಖನಿಧಿಯೊಳು ಹೊರಳುತೀರ್ವರು ಬಡಿದುಕೊಳ್ಳುತ |
ಚರರಿಗಾಜ್ಞೆಯನಿತ್ತರಕಟಾ ಬೇಗದಿಂದಿವನ ||
ಉರುತರಾದ್ಭುತ ಶೂಲಕೇರಿಸಿ | ಹರಣಕೊಳ್ಳಿರಿ ಬೇಗಪೋಗಿರಿ |
ಪುರಕೆ ಕೇಡನು ತರಲುಬಹುದೈ ನರವಿಘಾತಕನೂ || 21 ||
ಒಯ್ದರಾಗಳೆ ಗ್ರಾಮದಂತ್ಯಕೆ | ಬೈದರವನನು ಪೌರನಿಚಯಗ |
ಳೈದೆ ಕೇಳುತ ಪ್ರಾಣಕಾಂತರ ಮರಣವಾರ್ತೆಯನೂ ||
ಬೈದು ತಮ್ಮಯ ದುಷ್ಟದೈವಕೆ | ಗೈದರೈ ಸಹಗಮನ ಕಾರ್ಯದೊ |
ಳೈದೆ ನಿಂದರು ಭೂಪ ಸಚಿವರ ಪುತ್ರ ಪತ್ನಿಯರೂ || 22 ||
ಏನು ಪೇಳಲಿ ರಾಜಮಂದಿರ | ಹಾನಿಯಾದುದು ದುಃಖಸಿರಿಯೊಳು |
ಮಾನವಂತರು ಕಂಡು ಗುರುವಿಗೆ ನುಡಿವರೀಕಿವನೂ ||
ಹೀನ ಕೃತ್ಯವನೆಸಗಿದಕಟಾ | ಸಾನುರಾಗದಿ ಪ್ರಾಣ ಪಡೆವರ |
ಕಾಣೆನಿಳೆಯೊಳು ಬಾಲಘಾತಕನೇಕೆ ಜನಿಸಿದನೋ || 23 ||
ಪತಿಯ ಮೇಲಿನ ಭಕ್ತಿಯಿಂದಲಿ | ಗತಿಯು ತನಗಹುದೆಂದು ತಿಳಿಯುತ |
ಸತಿಯರೀರ್ವರು ಮಂದದೇವನ ಪೂಜೆ ತೀರಿಸುತ ||

ಸತಿಯು ಪೋಗಲು ಸಿದ್ಧರಾದರು | ಪತಿಯು ಹೊರತಿನ್ನಿಳುಹುವಂತಹ |
ಸತಿಗೆ ಪಾಲಕರಿಲ್ಲವೆನುತಲಿ ಪಿರಿಯರಡಿಗೆರಗೀ || 24 ||
ಪುರವೊಳಿಂತೀಯದ್ಭುತಂಗಳು | ಜರುಗಿತಕಟಾ ಗ್ರಾಮ ಬಹಿರದಿ |
ಪುರದ ಜ್ಞಾನಿಗಳವನ ನಿಲ್ಲಿಸಿ ಕರುಣ ಹೃದಯದಲೀ ||
ಕರೆದು ಕೇಳ್ದರು ನೀನದೇತಕೆ | ತರುಳರೆನ್ನದೆ ಕೊಯ್ದೆ ಶಿರಗಳ |
ಮರಳಿ ಪೇಳ್ವೆ ಮರಣ ಸಮಯಕೆ ಪೇಳ್ವ ತೆರನಂತೇ || 25 ||
ಲೋಹ ಶೂಲಸ್ತಂಭ ನಿಲಿಸುತ | ಹೋಹ ಪಶುಘಾತಕಿಗಳವನನು |
ಸಾಹಸಂಗಳ ಗೈದವೀರನೆ ಶಿಶುಹತಾಧಮನೇ ||
ಹೋಹುದೆಲ್ಲಿಗೆ ಶೂಲವೇರಲು | ಬೇಹುದಕಟಾ ನಿನ್ನ ಪೆತ್ತರ |
ಕಾಹುವಾತನ ಭಜಿಸಲೊಮ್ಮೆಯೆ ಮುಕ್ತಿ ನಿನಗಹುದೂ || 26 ||
ಎಂದು ಕ್ರೂರರು ಗುರುವಿನಂಗವ | ನಂದು ಶೂಲಕೆ ತಂದರಾದ್ಭುತ |
ವೆಂದು ಪುರಜನವೆರಡು ತಂಡಾಗಿರದೆ ನೋಡುತಲೀ ||
ನಿಂದರನಿಬರು ದುಃಖದಿಂದಲಿ | ಬೆಂದರನಿಬರು ಬೈದರವನನು |
ಕೊಂದುಹಾಕಿರಿ ಉಳುಹಬೇಡಿರಿ ನೀಚನಿಪನಿವನೂ" || 27 ||
ಗುರುವು ಮನದೊಳು ಚಿಂತೆಗೆಯ್ಯುತ | ಲಿರಲು ಶನಿರಾಯನದು ಕಾಟವು |
ಬರಲಿ ಇಳೆಯೊಳು ಪ್ರಾಣಿಮಾತ್ರಕೆ ಮರಣ ಬಿಡದೆಂದೂ ||
ಬೆರಳ ನಾಸಾಗ್ರದಲಿ ನೋಡಲು | ಬರಿದೆ ಬುದ್ಧಿ ಭ್ರಮಣವಾಗಿದೆ |
ಹರನೆ ಶಂಭುವೆ ತೋರದಕಟಾ ಕ್ಷೇಮ ಕಾಲವದೂ || 28 ||
ಬಿಡದಲಿವರನು ಬೇಡಿಕೊಳ್ಳುವೆ | ನೊಡನೆ ಪ್ರಾಣವ ತೆಗೆದುಕೊಳ್ಳದೆ |
ನುಡಿಯ ಲಾಲಿಸಿ ಗಳಿಗೆ ಎರಡನು ತಡೆಯಬೇಕೆಂದೂ ||
ಕೆಡಕು ಕಾಲವು ಕಳೆದುಪೋಗಲು | ಒಡನೆ ಬರುವದು ಕ್ಷೇಮಕಾಲವು |
ಒಡೆಯ ಶ್ರೀಶನಿರಾಯ ಕೃಪೆಯನು ತೋರ್ಪನನಿತರೊಳು || 29 ||
ಕೇಳಿರೆನ್ನಯ ಪ್ರಾಣಕೊಳ್ಳಲು | ಶೂಲ ಪಿಡಿದಿಹ ಅಪ್ಪಗಳಿರಾ |
ಕಾಲ ಕಳೆಯಲು ಎರಡು ಗಳಿಗೆಯ ಬದುಕಿ ಬಾಳುವೆನೂ ||
ನಿಲ್ಲದೀಯುವೆ ನಿಮಗೆ ಧನವನು | ಕೊಳ್ಳಿರೆನ್ನೊಳು ದಶಸಹಸ್ರವ |
ಕೊಲ್ಲಬೇಡಿರಿ ತಡೆಯಿರೆನ್ನಯ ನುಡಿಯನಾಲಿಸಿರಿ || 30 ||
ಅನಿತರೊಳಗಾ ಕಾಳ ಪ್ರಹರವು | ಸನಿಸಿತಾಗಲೆ ಶನಿಯ ಕಾಟವು |
ಘನದ ಶುಭಸೂಚಕದ ಕಾಲವು ತೋರಿತವರಿಗೇ ||

ಮನದ ದುಗುಡವು ಬಯಲದಾಯಿತು | ಜನಿತವಾದುದು ಕಲಕಲಸ್ವರ |
ತನಯರೀರ್ವರು ವಾಜಿಯೇರುತ ಬಂದ ವಾರ್ತೆಯದೂ || 31 ||
ರಾಜದೂತರ ಮುಖದಿ ಬೇಗನೆ | ರಾಜನಲ್ಲಿಗೆ ಬಂದು ತಲುಪಿತು |
ಸೋಜಿಗವು ತಾನಾಯ್ತು ಸಂದುದೆ ವಿಪ್ರಹತ ದೋಷಾ ||
ಮೂಜಗದೊಳೀ ದುಷ್ಟವಾರ್ತೆಯು | ಮಾಜಿ ನಿಲ್ವುದೆಯೆನುತ ರಾಜನು |
ರಾಜದೂತರ ಕರೆದು ಪೇಳ್ದನು ಭೂಸುರೋತ್ತಮನ || 32 ||
ಬೇಗ ಪೋಗಿರಿ ಕೊಲ್ಲಬೇಡೆನು | ತೀಗ ಪೇಳಿ ಚರರೆ ನಿಲ್ಲದೆ |
ರಾಗದೋರ್ವಂದಣದಿ ಕರೆಯಿರಿ ರಾಜಪೀಠದೊಳು ||
ಬೇಗ ಕುಳಿಸುತ ಬೇಡಿಕೊಳ್ಳುವೆ | ಹೋಗಿರಲ್ಲಿಗೆ ನೂಕಿ ಕ್ರೂರರ |
ನೀಗ ಕರೆಯಿರಿ ಎದುರುಗೊಳ್ಳಿರಿ ಬ್ರಾಹ್ಮಣೋತ್ತಮನಾ || 33 ||
ಎನಲು ಪೋದರು ಚರರು ಬೇಗದಿ | ಕಸಿಕರಾತ್ಮಕರಿವನ ಕೊಲ್ಲದೆ |
ಘನದ ಮರಣವ ನೀಗಿ ಬಂದಿಹ ನಮಗೆ ಅರ್ಪಿಸಿರೀ ||
ಎನಲು ಪೋದರು ಬಿಟ್ಟು ದುಷ್ಟರು | ಮನದೊಳಿಚ್ಛಿತ ಹಣವಕೊಳ್ಳುತ |
ಘನ ಸುತೋಷದಿ ಬಂದರೆಲ್ಲರು ಭೂಪ ಮಂದಿರಕೆ || 34 ||
ಬಂದು ಶ್ರೀಗುರುರಾಜನೆದುರಿಲಿ | ನಿಂದು ಪರಿಸುತ್ತಿರಲು ಭೂಪತಿ |
ಬೆಂದು ದುಃಖದಿ ಚರಣಕೆರಗಿದ ದೇವ ಚಿತ್ತೈಸೂ ||
ಇಂದು ನಾನತಿ ರಾಜಮದದಲಿ | ಬಂದ ಗುರುಗಳ ತಿಳಿಯಲರಿಯದೆ |
ಕೊಂದು ಹಾಕುವದೆಂದು ಚರರಿಗೆ ಕೊಟ್ಟೆನಾಜ್ಞೆಯನೂ || 35 ||
ಸಾಕು ಸಂಸಾರವದು ನನಗಿತಿ | ಕಾಕುಬುದ್ಧಿಯನಿತ್ತು ಪುತ್ರರ |
ಶೋಕದಲಿ ಮುಳಿಗೇಳದಾದೆನು ಚಿತ್ತ ವಿಭ್ರಮಿಸೇ ||
ಸಾಕು ಗುರುವಿನ ಚರಣಕಮಲವೆ | ನೂಕುವೆನು ಜನ್ಮಾಂತರಘವನು |
ಏಕಮನದಿಂದೆರಗಿ ಬಾಳ್ವೆನು ಕ್ಷಮಿಸಿ ರಕ್ಷಿಪುದು || 36 ||
ಎನಲು ನಿರ್ಜರದೇವನರಪನ | ಪಿಸುತ ಮುಕುಟವ ಪಿಡಿಯಿತೇಳೆಲೊ |
ಎನಗೆ ತಗಲಿದ ದುಃಖಕಾರಣ ಶನಿಯು ತಾನಿರ್ಪಾ ||
ಮನದೆ ವೇದನೆಗೊಳ್ಳಬೇಡೈ | ಕನಕದಾಸನವೇರು ಮೋದದೆ |
ಚಿನುಮಯಾತ್ಮಕ ದೇವ ಸಲಹುವ ಕೋಪವೆನಗಿಲ್ಲಾ || 37 ||
ಎಂದು ರಾಜನೆ ಮನ್ನಿಸುತ್ತಲಿ | ಚಂದದಿಂದಡಿ ಕುಳಿತ ಕಾಲಕೆ |
ಬಂದು ನುಡಿಸಿದ ಸಚಿವಶ್ರೇಷ್ಠನೆ ಶಿರಗಳೆಂತಿಹವೂ! ||

ತಂದುತೋರಿನೆ ವಸ್ತ್ರದೊಳಗಿಹ | ಕಂದರೀರ್ವರ ಶಿರಗಳಡಗುತ |
ಲಂದು ಕರಬೂಜೆಯವೆ ತೋರ್ದವು ಶನಿಯ ಮಹಿಮೆಯಲೀ ||38||
ಅಸಿತರೊಳಗಾ ಧರಣಿಪಾಗ್ರಣಿ | ಕುನಸು ಪಿಡಿಯದೆ ದೇವಗುರುವನು |
ಮನದಿ ಸಂತೋಷದಲಿ ಸ್ತುತಿಸುತ ಭೋಜನೋತ್ಸವಕೇ ||
ವಿನಯಪೂರ್ವಕವಾಗಿ ಕರೆಯಲು | ಘನಮಹಾತ್ಮನು ಬಂದು ರಾಜನ |
ಮನೆಯಲಮೃತದಿ ಪೂರ್ಣಪಾಕವ ಭೋಜನಂಗೆಯ್ಯೇ || 39 ||
ವರದ ಸುಗಾ್ರಸೋದಕಂಗಳ | ಕರಣ ಮೂರರೊಳರ್ಪಿಸುತ್ತಲಿ |
ತರಿಸಿ ವೀಳ್ಯವ ಕೊಟ್ಟು ವಸ್ತ್ರಾಭರಣ ನೀಡುತಲೀ ||
ಚರಣಕೆರಗುತ ಬೇಡಿಕೊಂಡನು | ತರುಳಗೆಯ್ದ ಮಿತಾಪರಾಧವ |
ಗುರುವೆ ಕ್ಷಮಿಸುತ ಕಾಯಬೇಕೈ ಬಾಲರೀರ್ವರನೂ || 40 ||
ಇನಿತು ಬೇಡುವ ನರಪಗಾಗುರು | ಮನದ ಪೂರ್ಣಾನಂದ ಭರದಲಿ |
"ತನಯರಷ್ಟೈಶ್ವರ್ಯ ಕೀರ್ತಿಯೊಳಿರುವುದೈ ನೀವು" ||
ಎನುತ ಪರಿಕೆಯ ನೀಡಿ ಬೇಗನೆ | ಘನದ ಲೋಕಕೆ ತೆರಳಿಪೋದನು
ಇನಸುತಾಗ್ರಣಿ ದಯದೆ ಬದುಕಿದೆನೆನುತ ಗುರುರಾಯಾ || 41 ||
ಶಸಿಯು ಗುರುಗಳನೋಡಿನುಡಿದನು | ಎನಿತುತೋರಿದುದೆನ್ನ ಮಹಿಮೆಯು|
ಮನಕೆ ತಾಕಿತೆ ಪೇಳಬೇಕೈ ಶನಿಯ ಕಾಡುವಿಕೇ ||
ಅನಿಮಿಷಾಗ್ರಣಿ ಸೂರ್ಯ ಪುತ್ರನೆ | ಘನಚರಿತ್ರನೆ ನಿನ್ನ ಕಾಟವ |
ನಿಸಿತು ಕಾಲದೆ ಸಹಿಸಲಾರದೆ ಬೆಂದೆ ದುಃಖದೊಳು || 42 ||
ತಿರುಗಿ ಏಳೂವರಿಯ ವರುಷಕೆ | ಗುರುಗಳವತೆಯದೆಂತುಗೆಯ್ವೆಯೊ? |
ಪರಮದೇವನೆ ಬಲ್ಲ ಗುರುವಿಗೆ ಕೊಟ್ಟ ಮಾನವನೂ ||
ಇರಲಿ ನಿನಗಿನ್ನಾಜ್ಞೆ ಶಿಷ್ಯಗೆ | ಪರರನೀ ತೆರ ಕಾಡಬೇಡೈ |
ಕರುಣದಿಂದಲಿ ನರರ ದೋಷವ ಕ್ಷಮಿಸುತಿರು ಕಂಡ್ಯಾ || 43 ||
ಗುರುವಿನುರುತರ ವಾಕ್ಯಗೇಳುತ | ಸರಸಿಜಾಪ್ತನ ತನಯ ಮಂದನು |
ಪರಮಗೆರುವದಲೆನ್ನ ನಿಂದಿಸಿ ಮರೆತು ಬಿಟ್ಟವನ ||
ತ್ವರದಿ ಸಾಹಸಗೆಯ್ದು ಕಾಡುವೆ | ನಿರುತದಿಂದಲಿ ಎನ್ನ ಕಥೆಯನು |
ಪರಿಮಭಕ್ತಿಯೊಲೋದಿ ಕೇಳುವ ಭಕ್ತವರ್ಯರಿಗೇ || 44 ||
ಮರೆಯದೀವೆನು ಫಲದ ರಾಶಿಯ | ಇರಲಿ ಶ್ರೀಗುರುದೇವನೆನ್ನಯ |
ಧುರುಳಕೃತ್ಯಕೆ ಮನದಿ ಖತಿಗೊಳ್ಳದಲೆ ಸಂತಸೆನ್ನ ||

ಗುರುಗಳಿಂಗೆರಗುತ್ತ ಶ್ರೀಶನಿ | ಯರಡೆ ತಪ್ಪನು ಕ್ಷಮಿಸುತೆನ್ನನು |
ಪೊರೆಯಬೇಕೆನೆ ಪರಿಸಿಕಳುಹಿದ ಗುರುಶನೈಶ್ವರನ || 45 ||

ಅಂತು ಸಂಧಿ 3 ಕ್ಕೆ ಪದ್ಯಗಳು 165 ಕ್ಕಂ ಮಂಗಳಮಸ್ತು.

ನಾಲ್ಕನೆಯ ಸಂಧಿ ಪ್ರಾರಂಭವು.

ಸೂಚನೆ:— [ಭಾಮಿನಿ ಷಟ್ಪದಿ]

ಕ್ಷಿತಿಪಕೇಳೈ ಕಾಡಿ ಸಲಹಿದೆ | ಖ್ಯಾತರಾವಣ ವಾಲಿ, ಕೌರವ, |
ಸೀತೆ, ಶಿವ, ರಾಮೇಂದ್ರ, ಕೃಷ್ಣ, ನಳೇಂದು, ಕುಂತಿಜರ, ||
ಬಳಿಕ ಶ್ರೀಶನಿದೇವನೀಶನ | ಬಳಿಗೆ ಪೋಗುತ ನಮನಗೆಯ್ಯುತ |
ತಿಳುಹಿ ಪೇಳ್ದನು ಬಂದ ಕಾರಣ ಉಮೆಯ ಕಾಂತನಿಗೇ ||
ಎಲವೊ ಬರುವಘಕಿಂತ ಮುಂಚಿತ | ತಿಳುಹಿ ಬಾರೆಲೊ ಗೆಯ್ವುದೇನದು! |
ಚಲುವ ಮಂದನೆ ಪೋಗಿ ಬಾಳೈ ಎನುತ ಪರಿಸಿದನೂ || 1 ||
ತಿರುಗಿ ಮೂರನೆ ದಿವಸ ಮಂದನು | ಬರುತ ಪೇಳ್ದನು ತಮ್ಮರಾಶಿಗೆ |
ಬರುವೆನೀಗಲೆ ಘಳಿಗೆಯೊಂದನು ಪೂರ್ಣಮುದದಿಂದ ||
ಹರನು ಕೇಳುತ ಮಂದ ದೃಷ್ಟಿಗೆ | ಗುರಿಯುದಾಗಲು ಬಾರದೆನುತಲಿ |
ಗಿರಿಯ ಭಾಗದಲೊಂದು ಕೋಣೆಯ ಸೇರಿ ಕುಳಿತಿರ್ದ || 2 ||
ಒಂದು ಗಳಿಗೆಯು ಗತಿಸುತಿರಲಾ | ಮಂದನಲ್ಲಿಗೆ ಬಂದು ಧೂರ್ಜಟಿ |
ಇಂದು ದುಃಖವನಿತ್ತುದೇನೈ? ಎನಗೆ ಹೇಳೆಂದಾ ||
ಮಂದದೇವನು ಪೇಳ್ದನಾಗಲೆ | ಇಂದುಧರನೇ ಪಾರ್ವತೀಶನೆ |
ಎಂದಿಗಾದರು ನಿಮ್ಮ ಭಯವೇ ಮೂರು ಲೋಕದಲೀ || 3 ||
ಇರಲು ದೇವತೆಗಳಿಗೆ ಮುಕ್ತಿಯ | ವರವನೀಯುವ ಶಕ್ತಿದೇವನೆ |
ಬರುವೆನೆಂದೆನಲಡಗೆಬಹುದೇ ? ಅಂಜಿಕೆಯುದಿಲ್ಲೇ ||
ಪೆರತದಾವುದು ಪೇಳು ಶಂಕರ | ಪೊರೆಯಬೇಕೈ ಮಂದನೆನ್ನಲು |
ಪರಿಸಿ ನುಡಿದನು ಮೂರು ಲೋಕವ ಭಯದೊಳಿಟ್ಟಿರುವೇ || 4 ||
ಎಂದು ಶಂಕರ ಶನಿಯ ಕೃತ್ಯಕೆ | ಚಂದದಿದಲಿ ಮುಗುಳು ನಗೆಯನು |
ತಂದು ನುಡಿದನು, ಕೇಳು ರವಿಜನೆ ಜಗದಿ ಮೂರರೊಳು ||

ಎಂದಿಗಾದರು ನಿನ್ನ ಧರಣಿಗೆ | ಬಂದು ನಿಲ್ವುದು ಸಕಲ ಜೀವಕೆ, |
ಅಂದದೋರುವ ತೆರದಿ ಪೋಗೈ ಇಲ್ಲಿ ನಿಲ್ಲದಲೇ, || 5 ||
ಹರನ ಪರಿಕೆಯು ಪಡೆದು ಸೂರ್ಯಜ | ಧರೆಯನಾಳುವ ರಾಮಚಂದ್ರನ |
ವರದರಾಶಿಗೆ ಬರಲು ಕಾನನವಾಯ್ತು ಸಾಮ್ರಾಜ್ಯಾ ||
ಧರಣಿತನಯೆಯ ರಾಶಿಗೈದಲು | ದುರುಳರಕ್ಕಸ ಪಾಲುಗೆಯ್ಸಿದೆ |
ಗರುಮೆ ವಾಲಿಯ ರಾಶಿಗೈದಲು ಪ್ರಾಣ ನೀಗಿಸಿದೆ || 6 ||
ರಾವಣಾಸುರನೆಂಬ ದುರುಳನು | ಕಾವನನುಜನ ವರಗಳಿಂದಲಿ |
ದೇವಮಾನುಷ ಲೋಕವೆಲ್ಲವ ಗೆಲಿದು ಮುದದಿಂದ ||
ದೇವಗೃಹಗಳನೆಲ್ಲಪೀಠಕೆ | ಸಾವಧಾನದಿ ಪೋಪಮಾರ್ಗದಿ |
ತೋರ್ಪ ಬೆನ್ನನೆ ಮೇಲೆ ಗೆಯ್ಯುತ ರಾಜ್ಯಪಾಲಿಪನೂ || 7 ||
ಹೀಗೆ ನವಗೃಹವೆಲ್ಲ ದುಃಖದಿ | ಬಾಗಿ ಜೀವಿಸ ಕಾಲಕಾದರ |
ವಾಗೆಋಷಿಬಂದಿಳಿದು ನುಡಿದನು ನಾರದೇಶ್ವರನೂ ||
ಹೀಗೆ ದುರುಳನ ವಶಕೆ ಬರಲತಿ | ಬಾಗಿ ಬಾಳ್ವತೆ ಶನಿಮಹಾತ್ಮನೆ |
ತಾಗಿಗರ್ವವ ಕಳೆದು ನೀಚನ ಸದೆಯಬಹುದೆಂದಾ || 8 ||
ಪೋಗಿ ನೀವಾ ಖಳಗೆ ನುಡಿವುದು | ಬಾಗೆದಂತಪ ರಿಪುಗಳನ್ನುರೆ |
ಸಾಗಬಹುದೇ? ಬೆನ್ನ ಮೆಟ್ಟುತಲೆದೆಯ ಮೆಟ್ಟದಲೇ ||
ಕೂಗುತಿರ್ಪುದು ಕೀರ್ತಿ ದೇಶಕೆ | ಹೀಗೆ ಸೂಚಿಸುತೆಮ್ಮ ದೃಷ್ಟಿಯು |
ತಾಗುವಂದದೆ ಕಜ್ಜಗೆಯ್ವುದು ಬಳಿಕ ನೋಡುವದೂ || 9 ||
ಇನಿತುನಾರದ ಕರುಣಿದೇವನ | ಮನದಿ ಭಜಿಸುತ ರಾಜಪೀಠದ |
ಘನದೃಷ್ಟೈಶ್ವರ್ಯಮದದಲಿ ಮೆರೆವ ಖಳನೆಡೆಗೆ ||
ಇನಿತು ದೋರುವ ವೀಣೆಯಧ್ವನಿ | ಜನಿಸಿ ಸುಸ್ವರದಿಂದ ಪಾಡುತ |
ಮುನಿಯು ಬರಲಿದಿರೆದ್ದು ರಾವಣ ನಮಿಸಿಕುಳ್ಳಿರಿಸಿ || 10 ||
ಪೇಳಬೇಕೈ ಲೋಕದೊಸಗೆಯ | ಕೇಳು ಬ್ರಹ್ಮನ ವರಗಳಿಂದಲಿ |
ಮೇಲು ತೋರ್ಪೆಯಾ ಸಕಲ ಭೂಪರಿಗೆಂದು ಬಣ್ಣಿಸಿದಾ ||
ಕೇಳು ರಾವಣ ನೀನೆಧನ್ಯನು | ಬಾಲಪ್ರೌಢನು, ಅಮಿತಶೌರ್ಯನು, |
ಲೋಲನಹೆನೀ ಸರ್ವವಿಷಯದಿ ಮೂರು ಲೋಕದಲಿ || 11 ||
ಬಳಿಕ ನುಡಿದನು ನಾರದೇಶ್ವರ | ಒಳಿತು ಗೆಯ್ದಿಯೊ ಸಕಲಕಾರ್ಯವ |
ನಿಳೆಗೆ ಕೀರ್ತಿಯು, ಪಬ್ಬಿಸಲ್ಕಾ ಕಜ್ಜಮೆಸಗುವದೂ ||

ಬಲಿದ ಕಾಯದ ಹೃದಯುಮೆಟ್ಟುವ | ದೊಳಿತು ತೋರ್ಪುದು ಬೆನ್ನನೆಲ್ಲರ |
ತುಳಿದಡೇನಹುದೆಂದು ಪೇಳಲು ಗ್ರಹವ ತಿರುವಿಸಿದಾ || 12 ||
ನೋಡಿರೀಗಳೆ ಮಂದದೇವನ | ಜೋಡಿದೃಷ್ಟಿಯು ತಾಗೆ ನಿತ್ಯದಿ |
ಹೂಡುತಿಹನೈ ದುರುಳಕೃತ್ಯಕೆ ಮನವನಂಜದಲೇ ||
ಬೇಡಬೇಡಂದಖಿಳರುಸುರಲು | ಮಾಡಿಮಡಿದನು ರಾಮನೊಳು ಹಗೆ |
ಖೋಡಿ ರಾವಣ ಪಾಪದಾರ್ಜನೆಯಿಂದ ಮೃತಿಯೆಯ್ದಾ || 13 ||
ಮತ್ತೆ ಲಾಲಿಸು ಭೂಪವಿಕ್ರಮ | ಉತ್ತಮೋತ್ತಮನೆನಿಪರಾಜನ |
ಸತ್ಯದಾ ಹರಿಶ್ಚಂದ್ರರಾಶಿಗೆ ನನ್ನ ದೃಷ್ಟಿಯನೂ ||
ಮತ್ತೆ ನೀಡಲು ಸ್ವಪ್ನದಲಿ ಮುನಿ | ಪೋತ್ತಮಂಗಿರದಿತ್ತ ದಾನವೆ |
ಸತ್ಯವಾಗಲು ಕೊಟ್ಟದಾನದ ಸತಿಸುತಾದಿಗಳ || 14 ||
ಕಾನನಕೆ ಕರೆತಂದು ಕಷ್ಟದಿ | ಹೀನದೈವದ ರಾಜಬಳಲುತ |
ಸಾನುರಾಗದಿ ಮುನಿಯ ಧನವನು ಗಳಿಸಿ ಕೊಡುವದಕೇ ||
ಏನು ಭವಣೆಯೊ ಸತ್ಯವಂತಗೆ? | ಮಾನದಿಂದಲಿ ಕೂಳುನೀರನು |
ಕಾಣಲಾರದೆ ಸೇವೆಮಾಳ್ಪುದಕೆಂದು ಕಾಶಿಯೊಳು || 15 ||
ಉತ್ತಮ ಧರಿತ್ರೀಶ ಮಡದಿಯು | ಹೆತ್ತದೇಹನ ಮಾರಿ ವಚನಕೆ |
ಇತ್ತನೈ ಧನ ದೇವಮನುಜರು ಪೊಗಳುವಂದದಲೀ ||
ಮತ್ತೆ ಕೇಳೈ ವಿಕ್ರಮಾರ್ಕನೆ | ಸತ್ಯದೊಳು ಪ್ರಖ್ಯಾತನಾದಸ |
ರ್ವೋತ್ತುಮನು ನಳರಾಜನೆಂಬನು ದ್ಯೂತ ಮುಖದಿಂದ || 16 ||
ಕಡೆಗೆ ಸಾಮ್ರಾಜ್ಯಾಧಿಕಾರವ | ನೊಡನೆ ನೀಗುತ ವಿಪಿನರಾಜ್ಯಕೆ |
ನಡೆದ ಸತಿ-ಸುತ ಸಹಿತ ಕಷ್ಟದಿ ಬಳಲುತಿರುವಾಗ ||
ಬಿಡುತ ಸತಿಯನು ನಡೆಯೆ ಮೋಸದಿ | ತಡೆಯು ಕಾಣದೆ ದುಃಖಸಾಗರ |
ಮಿಡುಕಿ ನಿಂತನು ಹಯುದ ರಕ್ಷಣೆಗೆನ್ನ ಕಾಟದಲೀ || 17 ||
ನರರ ಕಥೆಗಳ ಕೇಳಿದಂತಹ | ನರ ಕುಲಾಧಿಪ ಮತ್ತೆ ಲಾಲಿಸು |
ಸುರಪ ರಾಶಿಗೆ ನನ್ನ ದೃಷ್ಟಿಯು ಬೀಳುತಿರಲಾಯ್ತು ||
ವರದ ಗೌತುಮ ಸತಿಯುಹಲ್ಯೆಗೆ | ಮರುಳುಗೊಳ್ಳುತ ಚೋರತನದಲಿ |
ದುರುಳ ಕಜ್ಜವನೆಸೆಪ ಮನಕಾಯ್ತುಂಗ ಭಗಮಯವ್ರಾ || 18 ||
ಶಶಿಯ ರಾಶಿಗೆ ಪೋಗುವನಿತಕೆ | ಬೆಸಸಿತಾಗಲೆ ಮನವು ಹೀನಕೆ |
ಎಸೆವ ಗುರುಗಳ ಮಡದಿ ಮೇಲತಿ ಮೋಹದಲಿ ಪೋಗೇ ||

ಶಶಿಯು ಸುಂದರ ರೂಪ ನೀಗುತೆ । ನಶಿಸಿ ಪೋಗೆಂದೆಂಬ ಶಾಪದ ।
ಲಿಸೆಯುತಿರ್ಪನು ಕೇಳು ರಾಜನೆ ನನ್ನ ಮಹಿಮೆಯಲೀ ॥ 19 ॥
ಗುರು ವಶಿಷ್ಠರ ಹೀನರಾಶಿಗೆ । ಭರದಿ ಬರುತಿರೆ ನೂರು ಮಕ್ಕಳು ।
ಇರದೆ ಮಡಿದರು ಕೇಳು ರಾಜನೆ ಮತ್ತೆ ಕಥೆಗಳನೂ ॥
ವರ ಪರಾಶರ ರಾಶಿಗೈದಲು । ಮರುಳತನದಲಿ ಭ್ರಮೆಯಗೊಳ್ಳುತೆ ।
ವರಿಸಿ ಕೂಡಿದನಕಟ ನೀರೊಳು ಮತ್ಸ್ಯಗಂಧಿಯನೂ ॥ 20 ॥
ಪಂಡುಪುತ್ರರ ರಾಶಿಗೈದಲು । ಕಂಡರವರತಿ ಕಷ್ಟದೆಸೆಯನು ।
ಗಂಡರೈವರ ಮುಂದೆ ದ್ರೌಪದಿ ಮಾನ ಕೆಡಿಸಿದರೂ ॥
ಉಂಡು ಗರ್ವದೆ ಮೆರೆಯುತಿರುವಾ । ಚಂಡ ಕೌರವ ರಾಶಿಗೈದಲು ।
ಚಂಡು ನೂರನೆ ರಣದೆ ಕೆಡಹಿದರರಿಯು ಭೂವರರೂ ॥ 21 ॥
ತಿಳುಪೆ ಲಾಲಿಸು ವಿಕ್ರಮಾರ್ಕನೆ । ನಳಿನನಾಭನ ರಾಶಿಗೈದಲು ।
ಕಳವಿನಾರೋಪದಲಿ ಸಿಕ್ಕನು ವರ ಸ್ಯಮಂತಕದ ॥
ಕಳೆದುಕೊಳ್ಳಲು ಪೋದ ವಿಪಿನಕೆ । ಬಳಸಿ ತಿರುಗಿದ ಕದ್ದ ಮೃಗವನು ।
ಎಳೆದು ಬಡಿದನು ಜಾಂಬುವಂತನ ಚಕ್ರಹಸ್ತದಲೀ ॥ 22 ॥
ಮೆಚ್ಚಿ ಕೊಟ್ಟನು ಮಣಿಯ ಕುವರಿಯ । ಅಚ್ಯುತಾರ್ಪಣವೆಂದು ಭಕ್ತಿಯ।
ಚಿಚ್ಛಲವಗೀಯುತ್ತ ಮುಕ್ತಿಯ ತಂದು ತೋರಿದನೂ ॥
ಸ್ವಚ್ಛಮಣಿಯನು ಸತ್ಯಭಾಮೆಯ । ಅಚ್ಯುತಾಂಘ್ರಿಗೆ ನೀಡುತಖಿಲರ ।
ಮೆಚ್ಚಿಕೆಯ ಗಳಿಸಿರ್ದನಾ ಸತ್ರಾಜಿತನು ಭೂಪಾ ॥ 23 ॥
ಇನಿತು ಕಷ್ಟಗಳಿಂದ ಶ್ರೀಹರಿ । ತನಗೆ ಬಂದಿಹ ದುರಿತ ನೀಗಿದ ।
ತನಯ ವಿಕ್ರಮ ಕೇಳ್ವುದೀಪರಿ ದೇವದಾನವರ ॥
ಘನದ ಕಷ್ಟಗಳನ್ನು ಪಡಿಸಿದೆ । ನಿನಗೆ ಅನುಭವ ತೋರಲೆನ್ನುತ ।
ಕನಿಕರದಿ ನಾನಿನಿತು ಕಾಡಿದೆನೆಂದನಾ ದೇವಾ ॥ 24 ॥
ದೇವವಾಕ್ಯವ ಕೇಳಿ ವಿಕ್ರಮ । ಭಾವದೇಕದಲೆದ್ದು ಕರುಣದಿ ।
ಕಾವದೇವನ ಪಾದಕಮಲಕೆ ಬಾಗುತಿಂತೆಂದಾ ॥
ದೇವ ಲಾಲಿಪುದೆನ್ನ ಬಿನ್ನಪ । ಸಾವ ವಿಕ್ರಮ ಬದುಕಿ ನಿಂದೆನು ।
ಈವ ಮಹಿಮೆಯು ನಿನ್ನದಲ್ಲವೆ ನೀಡು ವರವೆನಗೇ ॥ 25 ॥
ನಿನ್ನ ಹೊರತನ್ಯರನು ಕಾಣೆನು । ಗನ್ನ ಪ್ರೇಮದಿ ಪೊರೆವ ದೇವನೆ ।
ಸನ್ನುತಾಂಗನೆ, ಮಂದದೇವನೆ, ನೀಡು ವರವೆನಗೆ ॥

ಅನ್ಯಭಾವವ ತ್ಯಜಿಸಿ ಚರಣಕೆ । ನಿನ್ನೊಳಿಡೆಗೊಂಡಿಹೆನು ದೇವನೆ ।
ಅನ್ಯರನ್ನೀಪರಿಯು ಕಷ್ಟಕೆ ನೂಕೆನೆಂಬೊರವಾ ॥ 26 ॥
ನೀಡಿ ಪೊರೆಯೈ ದೇವ ದೇವನೆ । ಕಾಡುದ್ಯೆವದೆ ನಿನ್ನ ರೂಪವ ।
ನೋಡದಿದ್ದೆನು ನಿನ್ನ ದಯದಲಿ ಕಂಡೆ ಮೂರ್ತಿಯನೂ ॥
ಆಡಲಾರದೊಲಾಯ್ತು ಮೋದವು । ಕೂಡಿಕೊಳ್ಳುವೆ ನಿನ್ನ ಪದದೊಳು ।
ನೀಡಿಸಲಹೈ ಕರುಣ ದೃಷ್ಟಿಯ ದೀನ ವಿಕ್ರಮಗೇ ॥ 27 ॥
ಪರರ ಕಷ್ಟದಲಳುಕುತಿರ್ಪೆನು । ಪರರ ನೀ ತೆರ ಕಾಡೆನೆನ್ನುವ ।
ವರವನೀಡೈ ದಾನವಿಧಿಗಳ ಪೇಳಿ ವಿಕ್ರಮಗೇ ॥
ಸುರನರೋರಗರಿಂದ ಪೂಜಿತ । ವರದ ಚರಣಾಂಬುಜನೆ ಕರುಣಾ ।
ಭರಿತದೇವನೆ, ಭಾನು ಪುತ್ರನೆ ವ್ರತವ ಪೇಳಯ್ಯಾ ॥ 28 ॥
ಕೇಳು ವಿಕ್ರಮ ರವಿಗೆ ಗೋದಿಯು । ಶಾಲಿತಂಡುಲ ಶಶಿಗೆ ತೊಗರಿಯ ।
ಬೇಳೆಕುಜನಿಗೆ, ಮುದ್ಗ ಬುಧನಿಗೆ, ಕಡಲಿ ಗುರುವಿಂಗೇ ॥
ಬೆಳ್ಳಿಗೆವರಿಯು ಸೂರ್ಯಪುತ್ರಗೆ । ಎಳ್ಳುರಾಹುಗೆ ಉದ್ದು ಕೇತುಗೆ ।
ಹುಳ್ಳಿ ಕೊಡುವುದು ಯೋಗ್ಯಪಾತ್ರಕೆ ಸಾರ್ಥಭಕ್ತಿಯಲೀ ॥ 29 ॥
ಕೇಳು ವಿಕ್ರಮ ಮೊದಲು ದಶರಥ । ಮೇಲು ಭಕ್ತಿಯೊಳೊಲಿದು ನನ್ನನು ।
ಕಾಳದುರ್ಭಿಕ್ಷವನೆ ಕಳೆದನು ತನ್ನ ರಾಷ್ಟ್ರದಲೀ ॥
ಪಾಳುಸಂಸಾರದಲಿ ದುಃಖದ । ಜಾಲಕಾವನು? ಬೀಳೆನೆಂಬನೊ ।
ಪೇಳುತಿರುವೀ ಸ್ತುತಿಯ ನೆಸಗಲು ಮೋದ ಪೊಂದುವನೂ॥ 30 ॥

ದಶರಥ ಕೃತ ಶ್ರೀ ಶನಿಸ್ತುತಿಯು.

ಶ್ರೀಶನೇಶ್ವರ ರೌದ್ರಮುಂದನೆ । ಭಾಸ್ಕರಾತ್ಮಜ ಕೃಷ್ಣ-ಪಿಂಗಲ- ।
ಶ್ರೀಶಬಭ್ರುವೆ ಯಮನೆ ಸಾರಿಯೆ-ಕೋಣನಂತಕನೇ ॥
ಈ ಸುನಾಮಗಳನ್ನು ನಿತ್ಯದೆ । ತೋಷದೊಳು ನುತಿಗೆಯ್ವರಘಪರಿ ।
ನಾಶವಪ್ಪುದುಚರಣ-ಕಾನತನಪ್ಪೆ ಸೂರ್ಯಜಗೇ ॥ 31 ॥
ದೇವದಾನವ ಗರುಡಗಂಧ । ರ್ವವಗಣಕಿಂಪುರುಷ ಪನ್ನಗ ।
ಸರ್ವವಿದ್ಯಾಧರರು ಮೆಲ್ಲರು ಪರಮ ದುಃಖದಲೀ ॥
ಶಾವು ಬೆಂದರು ವಿಷಮಕಾಲದೆ । ದೇವ ಶ್ರೀಶನಿ ಕ್ರೂರನೋಟದೆ ।
ಸಾವನಾತ್ಮಕ ಗೀಶಗಾನತನಪ್ಪೆ ಸೂರ್ಯಜಗೇ ॥ 32 ॥

ಮನುಜವರ್ಗವು ರಾಜವರ್ಗವು | ವನಪುರಂಗಳ ಪಶುಗಳೆಲ್ಲವು |
ಘನದಶಾರ್ದೂಲಾದಿ ಶ್ವಾಪದ ಕೀಟಕಾದಿಗಳೂ ||
ಮನಸಿನಂದದೆ ಚರಿಪ ಭೃಂಗವು | ಇನಿಸುಪ್ರಾಣಿಗಳಿನಜ ಕಾಟದೆ |
ತನುವಕೊರಗಿಪವದರಿ ನಾನತನಪ್ಪೆ ಸೂರ್ಯಜಗೇ || 33 ||
ದೇಶಗಳು ದುರ್ಗಗಳು ವನಗಳು | ಆ ಸುಚತುರಂಗಗಳು ಪುರಗಳು |
ತೋಷಪಡಿಪಾ ಪಟ್ಟಣಾದಿಗಳೆಲ್ಲ ಕಾಟದಲೀ ||
ಕ್ಲೇಶದಿಂದಲೆ ವಿಷಮ ಕಾಲದೆ | ಘಾಸಿಯುಪ್ಪವು ರವಿಜನೇತ್ರದಿ |
ಶ್ರೀ ಶನೇಶ್ವರದೇವಗಾನತನಪ್ಪೆ ಸೂರ್ಯಜಗೇ || 34 ||
ಎಳ್ಳಿನಿಂವರಯವಗೆಳಿಂದಲಿ | ಒಳ್ಳೆಯುದ್ದುಗೆಳಿಂದ ಕೂಡಿದ |
ಬೆಲ್ಲ ಪಾಕದೆ ಲೋಹದಾನದೆ ನೀಲವಸ್ತ್ರದಲೀ ||
ಸಲ್ಲಲಿತವಾಸರದೆ ಮಂತ್ರದೊ | ಳೆಲ್ಲತರವಲಿ ತೃಪ್ತನಪ್ಪನು |
ವಲ್ಲಭಶ್ರೀರವಿಜಗಾನತನಪ್ಪೆ ಸೂರ್ಯಜಗೇ || 35 ||
ವರಪ್ರಯಾಗದೆ ಜಮುನೆಧಡದಲಿ | ವರಸರಸ್ವತಿ ಪುಣ್ಯಜಲದಲಿ |
ಗಿರಿಯ ಗುಹೆಯಲಿ ಯೋಗನಾಗದೆ ಕುಳಿತ ಯೋಗಿಗಳು ||
ನಿರುತ ನಿಯಮದೆ ಸೂಕ್ಷ್ಮನೋಟದಿ | ಕರಣಶುದ್ಧದೆ ಭಜಿಸರದಿಂ |
ವರದ ಶ್ರೀಶನಿದೇವ ಗಾನತನಪ್ಪೆ ಸೂರ್ಯಜಗೇ || 36 ||
ಅನ್ಯದೇಶಗಳತ್ತಣಿಂವರ | ತನ್ನ ಗೃಹವನೆಪುಗುವ ಜನರಿಗೆ |
ನಿನ್ನ ವಾರವೆ ಸನ್ಮುಹೂರ್ತವು ಸುಖದಿ ಬಾಳಲ್ಕೇ ||
ಚೆನ್ನವಾಗಿಹ ಹೊರಪ್ರಯಾಣಕೆ | ಯಿನ್ನುವಾಸರಮುಂಟೆ? ಸೌಖ್ಯಕೆ |
ಗನ್ನನದರಿಂ ಮಂದಗಾನತನಪ್ಪೆ ಸೂರ್ಯಜಗೇ || 37 ||
ಸ್ಥಿತಿಯುಗೆಯ್ವನು ಶಾರದಾಂಬೆಯ | ಪತಿವಿಧಾತನು ಮೂರು ಲೋಕವ |
ಹಿತದಿ ರಕ್ಷಿಪ ಲಕ್ಷ್ಮುವಿಾಪತಿ ರುದ್ರ ಸಂಹರಿಪ ||
ನುತಿಪ ಋಗ್ಯಜು ಸಾಮವೇದ | ಪ್ರತಿಮಮೂರ್ತಿ ತ್ರಯದ ಶ್ರೀಶನಿ |
ಗತಿಯು ನೀನೆನುತೀಶಗಾನತನಪ್ಪೆ ಸೂರ್ಯಜಗೇ || 38 ||
ಜನಪ ಧಶರಥ ನೊಲಿದಿರುವದೀ | ಘನ ಶನೇಶ್ವರ ನಾಷ್ಟಕವನೇ |
ದಿನಪಸುದಯದೊಳಾರು ಪಠಿಪರು ಪುತ್ರಧನದಿಂದ ||
ತನುವಿಗುರೆ ಬಾಂಧವರ ಗಡಣದಿ | ದಿನಕರಾತ್ಮಜ ದಯದೆ ಭೋಗಿಸಿ |
ಚಿನುಮಯಾತ್ಮಕ ಲೋಕ ಪಡೆದಪರಂತ್ಯಕಾಲದಲೀ || 39 ||

ಕೋಣ ಪಿಂಗಲ ಕೃಷ್ಣ ಬಭ್ರುವು । ಪ್ರಾಣದಾಯಮು ರೌದ್ರ ಸೌರಿಯು ।
ಜಾಣ ಶ್ರೀಶನಿ ಮಂದನಂತಕ ನೆಸಿಪ ದಶಪೆಸರ ॥
ಧ್ಯಾನಗೆಯ್ವರಿಗುದಯ ಕಾಲಕೆ । ಹೀನ ಕಾಟವ ನೆಸಿತುಮೆಂದುಂ ।
ತಾನು ತೋರೆನದೆಂಬ ವರಗಳ ಕೊಟ್ಟ ದಶರಥಗೇ ॥ 40 ॥

ದಶರಥಕೃತ ಶ್ರೀ ಶನಿಸ್ತುತಿಯು ಸಂಪೂರ್ಣ.

ಆವ ಮಾನವನೆನ್ನ ಪೂಜಿಪ । ನಾವನೆನ್ನಯ ಕಥೆಯ ಕಥಿಪನು ।
ಆವನೆನ್ನಯ ಚರಿತ ಕೇಳ್ವನೋ ಭಕ್ತಿಭಾವದಲೀ
ಆವನೆನ್ನಯ ಗ್ರಂಥ ರಕ್ಷಿಪ । ನಾವನೆನ್ನಯ ಪ್ರೀತಿ ಗೆಳಿಪನೊ ।
ಸಾವ ಪರಿಯಂತರದಿ ರಕ್ಷಿಪೆ ಪುತ್ರ ಧನ ಸಹಿತ ॥ 41 ॥
ಬಿಟ್ಟನಾವನು ಮಂದಪೂಜೆಯ । ಬಿಟ್ಟನಾವನು ಶನಿಯ ಕಥೆಯನು ।
ಬಿಟ್ಟನಾವನು ಸೂರ್ಯಪುತ್ರನ ಚರಿತ ಕೇಳುವದೂ ॥
ಬಿಟ್ಟನಾವನು ಗ್ರಂಥ ರಕ್ಷಿಸ । ದಿಟ್ಟನಾವನನೇಕ ಭಕ್ತಿಯ ।
ಕೊಟ್ಟು ಪೋಪೆನು ಸಕಲ ಬಗೆಯಲಿ ಕಷ್ಟ ನಿಕರಗಳ ॥ 42 ॥
ಕೇಳು ವಿಕ್ರಮ ನಿನಗೆ ವರವಿದು । ಮೇಲೆ ಸುರಗಣವೈದೆ ಭಜಿಪುದು ।
ಕೇಳು ನಿನ್ನೊಳಗಿಪ್ಪಮೌಲ್ಯದ ಗುಣದ ರಾಶಿಯನೂ ॥
ಏಳು ಭೂಪನೆ ಮೆಚ್ಚಿ ಕೊಟ್ಟಪೆ । ಕೇಳು ವರವಿದೆ ಸತ್ಯವಪ್ಪುದು ।
ಬಾಳು ಸೌಖ್ಯದಲೆಂದು ಪರಿಸುತ ನುಡಿದ ವಿಕ್ರಮಗೇ ॥ 43 ॥
ದಿನದೊಳಾಗಲಿ ಮಂದವಾಸರ । ದಿನದೊಳಾಗಲಿ ಭಕ್ತಿಯಿಂದಲಿ ।
ಜನಕ ಶ್ರೀಶನಿರಾಯನಲ್ಲಿಯ ಭಕ್ತಿಯುಳ್ಳವರೂ ॥
ದಿನದೆ ಗ್ರಾಸವ ಕೊಡುತಲಾಗಲಿ । ತನಿವಫಲಮೂಲದಲಿಯಾಗಲಿ ।
ಘನದ ಪ್ರೀತಿಯಲಿನ್ನ ಚರಿತವನೋದಿ ಕೇಳುವದೂ ॥ 44 ॥
ಎಂದು ಶ್ರೀಶನಿ ವಿಕ್ರಮಾರ್ಕಗೆ । ಚಂದದಿಂದಲಿ ವ್ರತವಿಧಾನವ ।
ನಂದು ತಿಳಿಸುತ ಕೊಟ್ಟು ಪರಿಕೆಯ ನಡೆದನಂಬರಕೇ ॥
ಸಂದವಿಕ್ರಮ ಜಯಶನೈಶ್ಚರ । ಮಂದಮೂರುತಿ ಭಯನಿವಾರಕ ।
ನೆಂದು ನುತಿಸಿದ ತೋಷನಿಧಿಯೊಳು ಮುಳುಗುತೇಳುತಲೀ ॥ 45 ॥

ಅಂತು ಸಂಧಿ 4 ಕ್ಕೆ ಪದ್ಯಗಳು 210ಕ್ಕಂ ಮಂಗಳಮಸ್ತು.

ಐದನೆಯ ಸಂಧಿ ಪ್ರಾರಂಭವು.

ಸೂಚನೆ:— [ಭಾಮಿನಿ ಷಟ್ಪದಿ.]

ಶನಿಯ ದಯದಲಿ ಚಲುವನಾಗಿಹ | ಜನಪನೀಗುತ ಹೀನವಾರ್ತೆಯ |
ವನಿತೆಯಿರ್ವರ ಪಡೆದು ಸೌಖ್ಯದೆ ಜಗವ ಪಾಲಿಸಿದ ||
ಇತ್ತ ನಡೆದಿಹ ಕಥೆಗಳನ್ನರೆ | ಚಿತ್ತಗೊಡುತಲಿ ಕೇಳಬೇಕೈ |
ಉತ್ತಮೋತ್ತಮ ಶನಿಯ ಮಹಿಮೆಯೊಳಾದುದರಸಂಗೇ ||
ಚಿತ್ತಜೋದ್ಭವರೂಪದಿಂದಲಿ | ಮತ್ತೆ ಹೊಳೆವನು ಭಾನುತೇಜದೆ |
ಸತ್ಯವಿಕ್ರಮನಿದ್ದ ತಳಕಾ ಭೂಪನಡೆತಂದ || 1 ||
ಭೂಪಕಂಡನು ಸುಂದರಾಂಗನ | ರೂಪಜಿತ ಮನ್ಮಥನ ಕಣ್ಣಿನೆ |
ಈ ಪರಿಯೊಳಿಹ ವಿಕ್ರಮಾರ್ಕನ ನೋಡಿ ನಲಿದಾಡೀ ||
ಭೂಪಕುವರಿಯು ಚಂದ್ರಸೇನೆಯು | ತಾಪಸುತ ಶನಿದೇವದಯದಿಂ |
ಭೂಪವಿಕ್ರಮನನ್ನು ಭಕ್ತಿಯ ಭರದೆವರಿಸಿದಳೂ || 2 ||
ತನ್ನ ಕುವರಿಯು ವಿಕ್ರಮಾರ್ಕಗೆ | ತನ್ನ ತನುಮನ ನೀಡಿ ನಲಿವುದ |
ಚನ್ನವಾಗಿಯೆ ಕಂಡನೆದುರಿಲಿ ಚಂದ್ರಸೇನರಸೂ ||
ಮುನ್ನ ಬರುತಲಿ ಕೇಳಿಕೊಂಡನು | ಎನ್ನ ಮೇಲತಿ ದಯವಮಾಡುತ |
ಸನ್ನುತಾಂಗರ ಪೆಸರು ರಾಜ್ಯಗಳಾವವೆಲ್ಲಿಹವೂ || 3 ||
ರಾಜನಾಲಿಸು ನಾನು ನಿನ್ನಯ | ಆಜಿಯೊಳಗಿನ ಚೋರಶ್ರೇಷ್ಠನು |
ಗೋಜಿಗೇರಲುಬೇಡ ಕರಿಸೈ ಧನಿಕವೈಶ್ಯನನೂ ||
ರಾಜನಪ್ಪಣೆಯಿತ್ತ ಕೂಡಲೆ | ತೇಜಿರಾಹುತರೋಡಿಪೋಗುತ |
ರಾಜಿಸುತ್ತಿಹ ಧನಿಕವೈಶ್ಯನ ಕರೆದು ತಂದಿರಿಸೀ || 4 ||
ಭೂಪಗೆರುಹಲು ಸೇವಕಾಳಿಯು | ಭೂಪನತಿ ಸಂತೋಷದಿಂದಲಿ |
ರೂಪಪಡೆದಿಹ ವಸ್ತು ವಸ್ತ್ರವನಿತ್ತು ನಲಿದೊಲಿದೂ ||
ಭೂಪವೈಶ್ಯನ ಕಂಡು ಮಾಡಿದ | ಕೋಪದಿಂದಲಿ ತಂದ ಚೋರನು |
ಭೂಪಚಂದಿರನಂತೆ ಹೊಳೆವನು ನೋಡು ದಿಟ್ಟಸುತ || 5 ||
ಚಂದ್ರಸೇನನ ವಾಕ್ಯ ಕೇಳುತ | ಬಂದು ಶರಗೊಡ್ಡಿರಗಿ ಪದದೊಳು |
ಚಂದವಾಗತಿ ಬೇಡಿಕೊಂಡನು ಮನೆಗೆ ಕರೆಯುತಲೀ ||
ಅಂದು ಪರಿಪರಿಯಿಂದ ಹಲುಬಲು | ಮಂದಿ ಮಕ್ಕಳ ಸಹಿತ ವಿಕ್ರಮ |
ಚಂದ್ರಸೇನನ ಕೂಡಿಕೊಳ್ಳುತ ನಡೆದನಾಲಯಕೇ || 6 ||

ಪೋದರೆಲ್ಲಿಯು ನಿಲ್ಲದಂದದೆ | ಪೋದ ಮುತ್ತಿನ ಹಾರದೋಸುಗ |
ಇದೆ ನೋಡಲು ಚಿತ್ರವಾಯಿತು ಜೀವದುಂಚೆಯೊಲು ||
ಮೇದಿನಿಗೆ ಬಹು ಚೋದ್ಯಕಾಸ್ಪೈ | ಆದುದೀ ಕೃತಿ ಹಂಸ ಮುತ್ತನು |
ಆದರತ್ವದೆಯುಗುಳಿ ವಿಕ್ರಮಗಿತ್ತಿತ್ತೈ ಜಸವ || 7 ||
ಮುತ್ತಿನೆಳೆಯನು ಕದಲದಂದದೆ | ಇತ್ತು ಗೋಡೆಯನೇರುತಲ್ಲಿಯೆ |
ಮತ್ತೆ ಚಿತ್ರದ ರೂಪ ಧರಿಸುತ ಕುಳಿತುಕೊಳ್ಳುತಲೀ ||
ಚಿತ್ತವಪಹರಿಸುತ್ತ ಕಾರ್ಯವ | ನುತ್ತಮೋತ್ತಮ ಸಕಲ ಜನ ನೃಪ |
ರತ್ತ ನೋಡುವ ತೆರದಿ ಗೆಯ್ದಿತು ಮುಂದನಾಟದಲೀ || 8 ||
ಇದನು ಕಾಣುತ ವೈಶ್ಯ ಧನಿಕನು | ಸದಯ ರಾಯಗೆ ತನ್ನ ಪುತ್ರಿಯ |
ಮುದದಿಯರ್ಪಿಸಿ ತಪ್ಪು ಕ್ಷಮಿಸೆಂದೆರಗಿ ಬೇಡಿದನೂ ||
ಒದಗಿದಂತಹ ಕೆಟ್ಟ ವಾರ್ತೆಯು | ಬದಿಗೆ ಪೋಯಿತು ವಿಕ್ರಮಾರ್ಕಗೆ |
ಪದದೊಳೆರಗುತ ಬೇಡಿಕೊಂಡನು ಸಕಲ ಜನ ಸಹಿತ || 9 ||
ಚಂದ್ರಸೇನನು ಕರವನೊಡ್ಡುತ | ಅಂದು ತನುಗಿತ್ತಿರುವ ಶಿಕ್ಷೆಯ |
ನಿಂದು ನೆನೆಯದೆ ಪೊರೆಯಬೇಕೈ ಮಂದ ಬುದ್ಧಿಯನೂ ||
ಎಂದು ಬೇಡುತ್ತಿರಲು ವೈಶ್ಯನು | ನಂದನೆಯ ಸಹಿತರ್ಥವನ್ನುರೆ |
ಚಂದದಿಂದಲೆ ನೀಡಿಯರಗಿದ ದಯದೆ ಪೊರೆಯೆನುತ || 10 ||
ವಿಕ್ರಮಾರ್ಕನ ಕರೆದು ಕೇಳಿದ | ರಿಕ್ಕೆಲದ ಜನ ಮಂತ್ರಿ ಸಹಿತಲು |
ಚೊಕ್ಕ ವೀರನೆ ನಾಮ ದೇಶವ ಕುಲವ ಪೇಳೆನಲು ||
ನಕ್ಕು ವಿಕ್ರಮನೆಂಬ ಪೆಸರೈ | ತಕ್ಕ ರಾಜ್ಯವು ಮಾಳವಾವನಿ |
ಅಕ್ಕರಿಂದಲಿ ಕೇಳಿಕೊಳ್ಳಿರಿ ವೀರ ಕ್ಷತ್ರಿಯನೂ || 11 ||
ಎಂದು ಭಾಷಣೆಯಾದ ಕೂಡಲೆ | ಬಂದು ಎರಗಿದ ಪಾದ ಕಮಲಕೆ |
ಮಂದ ಬುದ್ಧಿಯಲಿತ್ತೆ ಶಿಕ್ಷೆಯ ಸಾರ್ವಭೌಮರಿಗೇ ||
ಎಂದಿಗಾದರು ತೀರದೈ ಖಲ | ನಿಂದೆ ಘಟಿಸಿದ ದೇಹದಂಡನೆ |
ಎಂದು ಬೇಡಿದ ಚಂದ್ರಸೇನಗೆ ಕೊಟ್ಟನಭಯವನೂ || 12 ||
ಆದುದಿಲ್ಲವು ನಿನ್ನ ಗರ್ವದೆ | ಆದುದೆನ್ನಿಂದೆನಗೆ ಶಿಕ್ಷೆಯು |
ಮೇದಿನೀಶನೆ ಕೇಳು ಶನಿದೇವರನು ನಿಂದಿಸಿದೇ ||
ಆದಕಾರಣದಿನಿತು ಕಷ್ಟದೆ | ಆದುದೈ ಬಹು ಕಾಲವೆನಗತಿ |
ಯಾದವೀಗಲೆ ನಿಮ್ಮ ದಯದಲಿ ಸರ್ವ ಸೌಖ್ಯಗಳೂ || 13 ||

ಬಳಿಕ ವಿಕ್ರಮರಾಜ ಗಾಣಿಗೆ । ನಿಲಯಕೈದುತ ಭಕ್ತಿಯಿಂದಲಿ ।
ನಲಿದು ವಂದಿಸಿ ತನ್ನ ಕಷ್ಟದೊಳನ್ನವಿತ್ತರಿಗೇ ॥
ಒಲಿದು ಗ್ರಾಮುವನಿತ್ತು ಪರಿಪರಿ । ಬಲಿದ ದಾನವಗೆಯ್ದು ಯಾಚಕ ।
ಬಳಗ ದಣಿಸಿದ ವಿಕ್ರಮಾರ್ಕನು ಭೋಜನಂಗಳಲೀ ॥ 14 ॥
ಇನಿತು ಸೌಖ್ಯದೆ ತಾಮಲಿಂದಾ । ವನಿಯೊಳಿರುತಿರೆ ತಿಂಗಳೊಂದನು ।
ಮನೆಗೆ ಕಳೆಯುತ ಭೂಪ ನುಡಿದನು ತೋಷದೊಳು ಮುಳುಗೀ ॥
ಇನಿತು ಶೌರ್ಯದ ಮಿಕ್ರಮೆನ್ನಯ । ಮನೆಯೊಳಿರುತಿರೆ ಎನ್ನಭಾಗ್ಯದ ।
ಎಣೆಯ ಕಾಣೆನುತಿದ್ದ ಭೂಪನು ಸೌಖ್ಯಸಾಗರದೀ ॥ 15 ॥
ಕೆಲವು ಕಾಲವು ಗತಿಸುತಿರಲಾ । ಚಲುವವಿಕ್ರಮ ತನ್ನ ಪುರದೆಡೆ ।
ಚಲಿಸುವಿಚ್ಛೆಯು ಆದುದೀಗಲೇ ನೀಡು ಆಜ್ಞೆಯನೂ ॥
ಒಲಿದು ಈ ತೆರದಿಂದೆ ಬಿನ್ನಿಸೆ ನಲಿದು ಇತ್ತನು ಸಕಲವಿಭವನು ।
ಒಲಿದು ಮಾವನ ಪಾದಕೆರಗುತ ನಡೆದವಿಕ್ರಮನೂ ॥ 16 ॥
ಇನಿತು ಪಡೆದಪ್ಪಣೆಯ ಭೂಪನ । ತನುವಿಗರೆಯಧಿಕಾರಿಇಬ್ಬರು ।
ಘನಸುಸಂತೋಷದಲಿ ಕೂಡುತ ಪೋಗೆಧನಸಹಿತ ॥
ಅನಿತರೊಳಗಾಪುರದ ಜನರುರೆ । ವಿನಯದಿಂದೆದುರ್ಗೊಂಡು ಪುರದೊಳು।
ಘನದಲುತ್ಸವದಿಂದ ರಾಜನ ಕರೆದು ಮನ್ನಿಸುತ ॥ 17 ॥
ಮರವುತೋರಣ ದಷ್ಟಗಂಧದೆ । ಭರಿತವಾಗಲು ದೇಗುಲೆಡೆಗಳು ।
ಪರಮ ಗುಡಿಗಳ ನೆಸೆವುತಿರ್ದವು ಮಂತ್ರಿಯಾಜ್ಞೆಯಲೀ ॥
ಸರಸ ಸುಮುಹೂರ್ತದಲಿ ವಿಕ್ರಮ । ನರಪನನ್ನರೆ ಗೆಯ್ದು ಭಕ್ತಿಲಿ ।
ಕರುಣದಿಂಪೊರೆಯೆಂದು ಬೇಡುತ ಕರವ ಮುಗಿದಿಹರೂ ॥ 18 ॥
ರಾಜಪೀಠವನೇರುವಾಗಲೆ । ರಾಜ ವಿಕ್ರಮ ಭಯದೆ ಭಕ್ತಿಲಿ ।
ತೇಜಮಾದಾ ರವಿಯನಂದನ ಶ್ರೀಶನೈಶ್ವರನ ॥
ಪೂಜೆಗೈಯುತ ಪಡೆದು ಮೋದವ । ರಾಜಪೀಠದಿ ಕುಳಿತು ಜಗವನು ।
ಮೂಜಗತ್ಪತಿ ಸಲಹುವಂದದೆ ಜಗವ ರಕ್ಷಿಸಿದ ॥ 19 ॥

ಶ್ರೀ ವೇದವ್ಯಾಸಕೃತ ನವಗ್ರಹಸ್ತುತಿ.

॥ ಕಂದಪದ್ಯಗಳು ॥

ಕಮಲವವಿಕಸಿತ ಗೆಯ್ವಗೆ । ವಿಮಲ ಸುಕಾಸ್ಯಪಗೆ ದಿವ್ಯತೇಜೋಮಯಗೆ ॥
ತಮಕುಲ ವಿನಾಶಮಾಳ್ಪಗೆ । ನಮಿಸುವೆನಾಂ ಭಾಸ್ಕರಂಗೆ ಪಾಪಂಗಳೆಯಲ್ ॥೨೦॥

ದಧಿಶಂಖ ಮಂಜಿನೊಳ್ಸರ | ಹೃದಯಂಗಿಂಗಿಡ ಸುಪುತ್ರಗಿಂದುಗೆ ಶಶಿಗೆ ||
ಪದಕೆರಗಿ ಬೇಡಿಕೊಳ್ವೆನು | ಮುದದಿಂ ಪರಶಂಭು ಶಿರವನಡರ್ದಗೆ ಜವದಿಂ ||೨೧||
ಕ್ಷಿತಿದೇವಿ ಸಂಭವಂಗೆ | ಜಿತವಿದ್ಯುನ್ಮಾಲೆಯಂತೆ ರಂಜಿಪ ವರಗೇ ||
ಧೃತಶಕ್ತಿ ಮಂಗಳಾಖ್ಯಗೆ | ನತನಪ್ಪೆಂ ಭೌಮದೇವ ಸೂರ್ಜಿತ ಗೆಯ್ಯಲ್ ||೨೨||
ಪ್ರಿಯಂಗು ಪೂವೋಲ್ಕಾಮಗೆ | ನಯದೊಳಗಪ್ರತಿಮರೂಪ ಸೌಮ್ಯದ ಗ್ರಹಗೇ ||
ನಿಯಮಿತ ಸದ್ಗುಣಧಾಮಗೆ | ಭಯಭಕ್ತಿಗಳಿಂದೆ ಸೌಮ್ಯಗಾನತನಪ್ಪೆಂ ||೨೩||
ದಿತಿಜರ್ಗಂ ಋಷಿಮುಗಳ್ಗಂ | ಹಿತದಿಂ ಗುರುವೆನಿಸಿ ಮಂತ್ರಿಪದದೊಳ್ಮೆರೆವಾ ||
ಜಿತಸ್ವರ್ಗರೂಪ ಕಾಮಗೆ | ಮತಿಯೊಳ್ಮೊಲೆಯೇಳ ದೀಕ ಗಾನತನಪ್ಪೆಂ ||೨೪||
ಹಿಮದೊಲ್ಕುಂದದ ಕೆರದಿಂ | ಸಮದಾವರೆ ದೇಂಟಿಸಂತೆ ಶುಭಕಾಯಂಗೇ ||
ತಮಹರ ಗುರ ಸರ್ವಜ್ಞಗೆ | ನಮಿಸುವೆನಾಂ ಭಕ್ತಿಯಿಂದೆ ಭಾರ್ಗವಗ್ರಹಗೇ ||೨೫||
ನೀಲಕ್ಕು ಕಪ್ಪಿನ ಕಾಯಗೆ | ಕಾಲಾಗ್ರಜ ಗರ್ಕದೇವ ತನುಸಂಭವಗೇ ||
ಲಾಲಿತಛಾಯಾ ರವಿಜಗೆ | ಪಾಲಿಪ ಶ್ರೀಮಂದದೇವ ಗಾನತನಪ್ಪೆಂ ||೨೬||
ಕಾಯದೊಳರ್ಧದೆ ಮೆರೆವಾ | ಮಾಯದ ವೀರಂಗೆ ಸೂರ್ಯಚಂದ್ರರನಭದೊಳ್ ||
ಗಾಯವ ಗೆಯ್ವಗೆ ಸಿಂಗದ | ಕಾಯದೆ ಜನಿಸಿರ್ಪ ರಾಹುಗಾನತನಪ್ಪೆಂ ||೨೭||
ಪಲಾಶ ಪುಷ್ಪದೊಲಂಗನೆ | ವಿಲಸಿತ ಭಗಣಾದಿ ಗ್ರಹಕೆ ಮಸ್ತಕನಹಗೇ ||
ಪ್ರಳಯದ ರುದ್ರ ಸುರೂಪಿಗೆ | ಬಲಯುತಗಾ ಘೋರಕೇತುಗಾನತನಪ್ಪೆಂ ||೨೮||
ನವಗ್ರಹ ನುತಿಗಳ ವ್ಯಾಕರು | ಭವನಸ ಖಪೆಚೇಸಲು ಗೆಯ್ದರದರಿಂ ಮನುಜರ್ ||
ಶವಕದೆ ಹಗಲಿರುಳೆನ್ನದೆ | ಸವನಿಪುದೀ ಸ್ತುತಿಗಳಿಂದೆ ಏಳ್ಗೆವೆಪೋಕುಂ ||೨೯||
ನರಗಂ ನಾರಿಗ ವರಗೆ | ನಿರುತದಲ್ಶೈತರ್ಪ ದುಷ್ಟ ಸ್ವಪ್ನದ ಫಲವಂ ||
ಪರಿಯುತ ಲೈಸಿರಿ ಬೀರ್ವುದು | ಕರುಣದಲಾರೋಗ್ಯ ಪುಷ್ಟಿವರ್ಧನಮಕ್ಕುಂ ||೩೦||
ಗ್ರಹದಿಂ ಚಿಕ್ಕೆಗಳಿಂದಂ | ಇಹದೊಳ್ಬರುತಿರ್ಪ ಜೋರ ವೈಶಾಖನರಿಂ ||
ಬಹುದುಃಖ ನಿಕರವೋಕುಂ | ಮಹವೇದವ್ಯಾಸ ಋಷಿಗಳನುಮತದಿಂದಂ ||೩೧||

|| ಭಾ. ಷ. || ನಿತ್ಯದಿಂದಲಿ ವಿಶ್ವಮಾರ್ಕನ | ಸ್ತುತ್ಯ ಶ್ರೀಶನಿರಾಯ ಚರಿತವ |
ಸುತ್ತುವೋತ್ತಮ ವೆನಿಪತೆರದಿಂದೊರೆದು ಭಕ್ತಿಯಲೀ |
ಚಿತ್ತಗೊಟ್ಟತಿ ಪ್ರೀತಿಯಿಂದಲಿ | ಮತ್ತೆ ನೋಳ್ಪರ ನೆಲ್ಲಕೂಡುತ |
ಸ್ತುತ್ಯವ್ರತವನೆ ದಾನ ಧರ್ಮವ ಗೆಯ್ವುಭಕ್ತಿಯೊಳು ||೩೨||
ಅವ ಬರೆದಪನಾವ ನೋಡ್ವನು | ಅವ ಕೇಳ್ವನು ಭಕ್ತಿಮಾರ್ಗದೆ |
ಅವನೀ ಸಚ್ಚರಿತ ಗ್ರಂಥವ | ಪೂಜೆಗೆಯ್ಯುವನೋ ||

ಅವನೀ ಶನಿದೇವಗೊಂದಿಪ | ನಾವಶೋಕವ ನೊಂದುವೂದರು |
ಭಾವವೇಕದೆ ಕೇಳ್ದಮಾತ್ರಕೆ ಸರ್ವಸುಖಿಯುಹನೂ || ೩೩ ||
ಶ್ರೀಶನ್ಯೈಶ್ವರ ನಾದಿಗ್ರಹಗಳ | ಕೋಪದಿಂದಲಿ ಚರಿತ ನಿತ್ಯದಿ |
ಸೂಸುತಾವನ ಮುಖದೊಳಿರ್ಪವೊ? ಅವನೆ ಪುಣ್ಯಾತ್ಮಾ ||
ಏಸು ಕಾಲಕು ಬರದು ಕಷ್ಟವು | ದಾಸರಂದದೆ ಬಹವು ಸುಖಗಳು |
ಶ್ರೀಶವುಂದನ ಮಹಿಮೆಯಿಂದಲಿ ಸಕಲ ಸಿದ್ಧಿಪುದೂ || ೩೪ ||
ಶ್ರೀಶನೇಶ್ವರ ಮಂದದೇವನೆ | ಈಶ ಶ್ರೀಜಗದೀಶ, ರವಿಸುತ |
ದೋಷ ವೀಕ್ಷಿಸಬೇಡ ಕಂದನು ನಿನ್ನ ಇಚ್ಛೆಯಲೀ ||
ಭಾಷೆಗೆಯ್ಯುತ ನಿನ್ನ ಚರಿತವು | ಸೂಸುವಂದದೆ ಗೆಯ್ಸಿದಲ್ಲವೊ? |
ಏಸು ಕಾಲಕೆ ನಿನ್ನ ಪೊಗಳುವದಾರ್ಗೆ ಕಾಣಿಸದೂ || ೩೫ ||
ಕೋಪದಿಂದಲಿ ಜಗವ ಪಾಲಿಪ | ಭಾಸ್ಕರಾದೀ ಗ್ರಹದ ರೂಪಿಲಿ |
ವಾಸವಾಗಿಹ ಲೋಕರಕ್ಷಕ ಭಕ್ತಪೋಷಣಕೇ ||
ಸ್ತೋಸಿಲಿಂದಲಿ ತನ್ನ ಕೃತ್ಯವ | ಸೋಸಿಗೆಯ್ಯುವ ನೆವದೆ ತರುಳನ |
ಭಾಷೆಮಾಡಿಸಿ ಗ್ರಂಥರೂಪದಿ ತಾನೆ ಪೈದೋದಾ || ೩೬ ||
ಶನಿಯ ಚರಿತವು ಪುಣ್ಯಕರವದು | ಶನಿಯ ಕರುಣಕೆ ಯೋಗ್ಯಮಾಳ್ಪದು ||
ಎನಿತು ಗ್ರಹಗಳು ವೇಕಕಾಲಕೆ ಪೀಡೆಗೆಯ್ದಡೆಯೂ ||
ಮನದಿ ಭಕ್ತಿಯನಿಟ್ಟು ಚರಿತವ | ನನುದಿನದಿ ಬರಿದೋಲ್ದು ಕೇಳ್ದಡೆ |
ಘನ ಸುಕರುಣಾರ್ಣವದ ಶ್ರೀಶನಿರಾಯ ಕರುಣಿಪನೂ || ೩೭ ||
ಸುರಗಿರೀಶನ ದಯದಿಬಾಳುವ | ಗಿರಿಜೆಕಾಂತನ ಪೂಜೆಗೆಯ್ಯುವ|
ಪರದ ಜಾನಕಿನಾಥ ರಾಮನದಾಸ ಬಾಲಕನ ||
ಕರದಿ ಬರಿಸಿದ ಗ್ರಂಥದೋಷವ | ನುರೆದು ರಂಜಿಪ ರಸವನೀಂಟುತ |
ಕರುಣದಿಂದಲಿ ಪೊರೆಯ ಬೇಳ್ಪೆನು ತ್ರಿಕರಣಪೂರ್ವದಲೀ || ೩೮ ||
ಗಂಡುಗಲಿ ನವಗ್ರಹದ ಚರಿತವು | ಪಾಂಡುರಂಗನ ದಯದೊಳಾದ.ದ |
ಕಂಡು ಸ್ವೀಕರಿಸುವದು ಸುಜನರು ಶನಿಯ ದಯದಿಂದ ||
ಚಂಡಶತೆಲ್ಸರಿ ಫಾಲ್ಗುಣಾಷ್ಟಮಿ | ಕಂಡು ಶುದ್ಧದೊಳಾದುದೀ ಕೃತಿ |
ಪುಂಡ ಶ್ರೀಶನಿರಾಯಗರ್ಪಿತವುಕ್ಕೆ ಸತ್ವರದೀ || ೩೯ ||
ಜಯಜಯತು ಶನಿರಾಯ ದೇವಗೆ | ಜಯಜಯತು ಗ್ರಹರೂಪದೀಶಗೇ |
ಜಯ ಜಯತು ಶ್ರೀಸೃಷ್ಟಿಪಾಲಕ ದುಷ್ಟನಿಗ್ರಹಗೇ ||.

ಜಯುಜಯುತು ಸದ್ಭಕ್ತ ಪೋಷಗೆ | ಜಯು ಜಯುತು ಶ್ರೀಸೂರ್ಯಪುತ್ರಗೆ |
ಜಯು ಜಯುತು ಶ್ರೀವುತ್ತ ವಿಕ್ರಮ ವಾನ ಸೆಳೆದವಗೇ || ೪೦ ||
ಜಯುಜಯುತು ನಳನನ್ನು ಕಾಡ್ದಗೆ | ಜಯುಜಯುತು ಪಾಂಡವರ ಪೀಡ್ದಗೆ |
ಜಯು ಜಯುತು ಶ್ರೀರಾಮಚಂದ್ರನ ವಿಪಿನಕಟ್ಟಿದಗೇ ||
ಜಯು ಜಯುತು ದಶಶಿರನ ಕೊಂದಗೆ | ಜಯು ಜಯುತು ಸುರಪತಿಯು ಕಾಡ್ದಗೆ |
ಜಯು ಜಯುತು ಶ್ರೀಹರಿಹರಾದಿಗಳನ್ನು ಕಾಡಿದಗೇ || ೪೧ ||
ಜಯು ಜಯುತು ಗುರುಗಳನು ಕಾಡ್ದಗೆ | ಜಯು ಜಯುತು ಶ್ರೀ ಮಂಗಳಾಂಗಗೆ |
ಜಯು ಜಯುತು ಶ್ರೀ ಜಗದಧೀಶ್ವರ ಸಾರ್ವಭೌಮನಿಗೇ ||
ಜಯು ಜಯುತು ಸನ್ನುತ ಚರಿತ್ರಗೆ | ಜಯು ಜಯುತು ಸಚ್ಚರಿತಪೂರ್ಣಗೆ |
ಜಯು ಜಯುತು ಸಾನಂದಮೂರುತಿ ಕರುಣಸಾಗರಗೇ || ೪೨ ||
ಜಯು ಜಯುತು ನವಗ್ರಹದ ರೂಪಗೆ | ಜಯು ಜಯುತು ಸರ್ವಾಂಗ ಶುದ್ಧಗೆ |
ಜಯು ಜಯುತು ಭಕ್ತಜನ ಮಾನಸ ಸರಸ ಹಂಸನಿಗೇ ||
ಜಯು ಜಯುತು ಶ್ರೀಮಂದದೇವನೆ | ಜಯುಜಯುತು ಶ್ರೀಭೈರವೇಶ್ವರ |
ಜಯುವ ನೀಯುತ ಪೊರೆವ ದೇವಗೆ ಜಯುವು ನಿತ್ಯದಲೀ || ೪೩ ||

ಶ್ರೀಶನೇಶ್ವರ ರೂಪೀ ವಿಶ್ವಂಭರಮೂರ್ತಿ

|| ಆರತೀ ಪದ್ಯಗಳು. ||

ಮಂಗಳಂ ಜಯುಮಂಗಳಂ | ಶ್ರೀ ಮಂದನೆ | ಮಂಗಳಂ ಶುಭಮಂಗಳಂ || ಪ ||
ರವಿತನು ಸಂಜಾತಾ ಹೇ ತಾತಾ | ನವಗ್ರಹದೊಳು ಖ್ಯಾತಾ || ತವನಾಮ ಜಪಿ
ಸಲು | ಧವಗಳ ಹರದಾತಾ | ದಿವಿಜರಿಂ ಪೂಜೆಯು ಗೊಳ್ಳುವ ಖ್ಯಾತಾ ||೪೪||
ದುಷ್ಟಮರ್ದನ ಗೆಯ್ಯುವ | ಹೇ ದೇವನೆ | ಶಿಷ್ಟರನ್ನು ರೆ ಪೊರೆವ | ನಿಷ್ಠೆಯಿಂ
ಪೊಗಳಲು | ಇಷ್ಟವನೀಯುವ | ಕೃಷ್ಟಿಗೀಶನೆ ದಯಾ ಕಷ್ಟವ ಕಳೆಯ್ಯಾ ||೪೫||
ಸುರಗಿರಿ ರಕ್ಷಿಪನೇ | ಸದ್ಭಕ್ತರ | ಕರುಣದಿಂ ಪೊರೆಯುವನೇ || ನಿರುತದಿಂ ನಿನ್ನಯ|
ಸ್ಮರಣೆಯೊಳಿರುವಂಥ | ವರಭಕ್ತ ಜನರಿಂಗೆ | ಪರಸೌಖ್ಯವೀವಗೆ ||೪೬||
ಮಂಗಳಂ ಜಯು ಮಂಗಳಂ | ಶ್ರೀ ಮಂದನೆ | ಮಂಗಳಂ ಶುಭ ಮಗಳಂ.||

|| ಅಥ ನಾರದ ಋಷಿಕೃತ ದತ್ತಾತ್ರಯ ಸ್ತೋತ್ರ ಪ್ರಾರಂಭಃ ||

|| ಕಂದ ಪದ್ಯಗಳು. ||

ಜಡೆಧರ ಧವಲ ಸುಕಾಯುನ | ಕಡುಗಲಿ ಶೂಲಾಂಕ ದಯುದ ಸಾಗರ ನಿಹದೊಳ್ |
ಜಡಗಳ ನಾಶಿಪ ದೇವನ | ಬಿಡದಲೆನಾಂ ಭಜಿಪೆ ದೇವದತ್ತಾತ್ರಯನಂ ||೪೭||

ಜಗವಂ ನಿರ್ಮಿಸಿದಂಗೇ | ಜಗವಂ ಕಾಯ್ವಂಗೆ ಪತ್ತೆ ಸಂಹರಿಪಂಗೆ ||
ಜಗದುಃಖ ನಾಸಿಪಂಗೇ | ಭಗವಾನ್ ದತ್ತಾತ್ರಿ ಮೂರ್ತಿ ಗಾನತನಪ್ಪೇಂ||೪೮||
ಜರೆಯುಂ ನೀಗಿದ ದೇವಗೆ | ಉರುತರ ಶುದ್ಧತೆಯುಗೆಯ್ವ ದಿಗ್ವಸನಂಗೇ ||
ಕರುಣಾಕರ ಮೂರ್ತಿಗಂಗೇ | ಶ್ರೀ ದತ್ತಾತ್ರಿ ಮೂರ್ತಿ ಗಾನತನಪ್ಪೇಂ ||೪೯||
ಕರ್ಪೂರ ಸಮರವ ಕಾಂತಿಯು | ಲೊಪ್ಪುವ ದೇಹಂಗೆ ದಿವ್ಯರೂಪಿಗೆ ನಾಲ್ಕಾ ||
ರಿವ್ಪಾಸು ವೇದಶಾಸ್ತ್ರಗೆ | ತಪ್ಪಿಪ ಭವಜಾಲ ದತ್ತ ಗಾನತನಪ್ಪೇಂ ||೫೦||
ಘನ್ನವು ಸೂಕ್ಷ್ಮತ ಮೇಣಾ | ಉನ್ನತ ತಾನವನತಾದಿ ಯಭಿಧಾನಗಳ ||
ಮುನ್ನವೆ ಗೋತ್ರವ ವಿಾರಿದ | ಸನ್ನುತ ದತ್ತಾತ್ರಿಮೂರ್ತಿ ಗಾನತನಪ್ಪೇಂ||೫೧||
ಯಜ್ಞವ ನುಂಬಗೆ ಯಜ್ಞಗೆ | ಯಜ್ಞದ ರೂಪಿಂಗೆ ಯಜ್ಞ ಪ್ರೀತ್ಯಾಸ್ಪದಗೇ ||
ಯಜ್ಞಕ್ಕೊಲಿಸುಗೆ ಜನಿತಗೆ | ಸುಜ್ಞ ಶ್ರೀ ದತ್ತಮೂರ್ತಿ ಗಾನತನಪ್ಪೇಂ ||೫೨||
ಮೊದಲೊಳು ಬ್ರಹ್ಮಸುರೂಪಿಗೆ | ತದನಂತರ ವಿಷ್ಣುರೂಪಿ ಗಂತ್ಯಕೆ ಶಿವಗೇ ||
ಸದಯುದ ರೂಪತ್ರಯುಗೇ | ಮುದದಿಂ ದತ್ತಾತ್ರಿ ಮೂರ್ತಿ ಗಾನತನಪ್ಪೇಂ ||೫೩||
ಭೋಗದ ಗ್ರಹಿಯಿಗೆ ಭೋಗಿಗೆ | ಯೋಗ್ಯಕೆತಾಂ ಯೋಗ್ಯಮೆನಿಪ ರೂಪಂಧರಗೇ||
ಯೋಗಿ ಜಿತೇಂದ್ರಿಯ ದೇವಗೆ | ನಾಗಾನತ ದತ್ತ ಮೂರ್ತಿ ಗಾನತನಪ್ಪೇಂ||೫೪||
ದಶದಿಗ್ವಸನ ಸುಧೃತನಿಗೆ | ವಿಶದಾತ್ಮಗೆ ದಿವ್ಯರೂಪ ಧಾರಿಗೆ ಸತತಂ ||
ಅಸದೃಶ ಪರಮಬ್ರಹ್ಮಗೆ | ನಿಸದಂ ದತ್ತಾತ್ರಿ ಮೂರ್ತಿ ಗಾನತನಪ್ಪೇಂ ||೫೫||
ಜಂಬೂ ದ್ವೀಪಸು ನಾಮದ | ತಾಂಬಹು ಕೃಷ್ಣಾತ್ಮ ಕ್ಷೇತ್ರ ಮಾತಾಪುರದೊಳ್ ||
ಸಂಭ್ರಮದೊರ್ತಿಪ ಜಯಮಾ | ನೆಂಬಸುದತ್ತ ಮೂರ್ತಿಗಾನತನಪ್ಪೇಂ ||೫೬||
ಭಿಕ್ಷೆಯ ನೆವದಿಂ ಗ್ರಾಮವ | ರಕ್ಷಿಸುತಂ ಗ್ರಹವಪಿಡಿದು ಪೊಂಬಟ್ಟಲಮಂ ||
ರಕ್ಷಿಸೆ ಪಲವೋದನಗಳ್ | ಸಾಕ್ಷಿದ್ದತ್ತಾತ್ರಿ ಮೂರ್ತಿ ಗಾನತನಪ್ಪೇಂ ||೫೭||
ಪರಮ ಬ್ರಹ್ಮಜ್ಞಾನವೇ | ವರವ ದ್ರಾಂಕಿತಗೆ ಧರಣಿಯಾಕಾಶಗಳ ||
ಪರಿಧಾನಗೆ ಸನ್ಮತಿಕಲೆ | ವರೆವಗೆ ದತ್ತಾತ್ರಿ ಮೂರ್ತಿ ಗಾನತನಪ್ಪೇಂ ||೫೮||
ಅವಧೂತ ಸದಾನಂದಂ | ಭವಹರಪರ ಬ್ರಹ್ಮರೂಪ ವಿಶ್ವಂಭರಗೇ ||
ಸುವಿದೇಹರೂಪಧಾರಿಗೆ | ಜವದಿಂ ದತ್ತಾತ್ರಿಮೂರ್ತಿ ಗಾನತನಪ್ಪೇಂ ||೫೯||
ಸತ್ಯಸ್ವರೂಪಿಗೆ ದಿಟದಲಿ | ವರ್ತಿಪಸದ್ಧರ್ಮನಿರತ ಸತ್ಯಾಶ್ರಯಗೇ ||
ಸತ್ಯಪರೋಕ್ಷಗೆ ಭಯಮೇಣ್ | ಭಕ್ತಿಲಿ ದತ್ತಾತ್ರಿಮೂರ್ತಿಗಾನತನಪ್ಪೇಂ ||೬೦||
ಶೂಲಸುಗದೆಗಳ ಕರದೋ | ಳ್ತಾಳುತನನಮಾಲಿ ಕಂಠಪೂರಿತಪರಗೇ ||
ಮಾಲಿಗೆಯುಗ್ನಿಸ್ಫೂರ್ತಿಗೆ | ಪಾಲಿಪದತ್ತಾತ್ರಿ ಮೂರ್ತಿ ಗಾನತನಪ್ಪೇಂ ||೬೧||

ನಾಶಿಪ ನಶಿಸದ ಕಾಯುಗೆ | ಈಶರ್ಗಂವಿಭೂಶನಾಗಿ ರಂಜಿಪಪರಂಗೇ ||
ತೋಷದಲಿತ್ತುದ ಭಕ್ಷಿಪ | ಶ್ರೀಶಂದತ್ತಾತ್ರಿ ಮೂರ್ತಿಗಾನತನಪ್ಪೆಂ ||೬೩||
ಈವಗೆ ವಿದ್ಯಾಮೃತವಂ | ಈವಗೆ ಲಕ್ಷ್ಮೀಶ ಮೂರ್ತಿಗಾತ್ಮದ ತೆರದಿಂ ||
ದೀವಗೆ ದಿವ್ಯ ಸುಕಾಯುವ | ಪಾವನ ನಿರ್ಗುಣದ ಮೂರ್ತಿ ಗಾನತನಪ್ಪೆಂ||೬೪||
ಅರಿಗಳ ನಾಶಿಪುದೀಸ್ತುತಿ | ಅರುಪಿಪ ಸುಜ್ಞಾನವನ್ನೇ ಕುಡುವುದು ಸತತಂ ||
ದುರಿತಧ್ವಂಸವ ಗೆಯ್ವುದು | ವರದತ್ರೀದತ್ತ ಮೂರ್ತಿ ಗಾನತನಪ್ಪೆಂ ||೬೫||
ನುತಿಯಿದು ಪರತರ ಮೆನಿಪುದು | ಹಿತದಿಂದತ್ತಾತ್ರಿ ಮೂರ್ತಿ ಪ್ರತ್ಯಕ್ಷಿಸುಗುಂ ||
ಮತಿವಂತ ದೇವಋಷಿತಾಂ | ಸ್ತುತಿಗೆಯ್ದಂ ದತ್ತ್ರಸತ್ಫಲಂಗಳ ನೀಯಲ್ ||೬೬||

ಇತಿ ಶ್ರೀ ನಾರದ ಪುರಾಣೇ ನಾರದ ಕೃತ
ದತ್ತಾತ್ರೇಯ ಸ್ತುತಿ ಸಂಪೂರ್ಣಮಸ್ತು.
ಅಂತು ಸಂಧಿ ೫ ಕ್ಕೆ ಪದ್ಯಗಳು ೨೬೫ಕ್ಕಂ ಮಂಗಳಮಸ್ತು.

ಸಮಾಪ್ತಿ ಪದ್ಯ.

(ಶಾರ್ದೂಲವಿಕ್ರೀಡಿತ ವೃತ್ತ.)

ಅಂತರ್ಯಾಮಿಯು ತಾನೆ ಪೇಳ್ದ ತೆರದಿಂ ಮೈಗೊಂಡ ಸದ್ಗ್ರಂಥವೂ |
ಇಂತೀ ಕನ್ನಡ ಪದ್ಯದೊಳ್ ರಚಿತಮಾಯ್ತೀ ಮಾಲತೀಶಾಜ್ಞೆಯಿಂ ||
ಚಿಂತಾದೋಷ ವಿನಾಶಗೆಯ್ದು ಪೊರೆಗುಂ ಸದ್ಭಕ್ತರಂ ಪ್ರೇಮದಿಂ |
ಸಂತೋಷಂ ನೆಲೆಗೆಯ್ಸಿ ಧಾತ್ರಿತಳದೊಳ್ ಸದ್ವಿದ್ಯೆಯನ್ನೀವುದು ||೧||

ಸಂಪೂರ್ಣ.

॥ ಶ್ರೀ ಸವರಾಜಾಂತರ್ಗತ ಶ್ರೀ ಜಗದ್ರಕ್ಷಕಾಯನಮಃ ॥



ದೇವಗ

ಸಂ

ರೀ ಪುರದುತ್ತ

ರೊಳ್ ನೆಲಸಿ

ಂ ಭಕ್ತರಭೀಷ್ಟ

ಳ್ವಂ ಭಗವಂತ

ತ್ತಾ ಸ್ಥಾನಕೆ ಅಚ

ದ್ವ್ಯಾವುದು ಶಾ

ದ್ವಾರಕನಿಚ್ಛ

ರ್ತಾರಂ ಬಗೆಗೊಂ

ತೋಷಂ ನೆರೆಗೊ

ಹಾದೇವನ ಪ್ರೀತಿ

ಂ ಶಿವಪೂಜೆಗ

ತಾ ಪ್ರಭುಗೆಯ್ಸುತಿರ್ಪ ನದನೇ ತಾವೆಲ್ಲರೊಪ್ಪಿರ್ಪುದೂ ॥ 3 ॥

ಗಾದರು ದರ್ಶನೋತ್ಸವಕೆ ಬಂದಲ್ಲಿರ್ಪ ಕಾರ್ಯಂಗಳಂ ।

ರ್ ನೆರೆ ನೋಡಿ ಮೋದಬಡಿದೇ ಉಲ್ಲೇಖಿಸಿರ್ಪರ್ ನಿಜಂ ॥

ಳ್ವಂ ಸಕಲರ್ಗೆ ಚೇತನವ ತಾಂ ನೀಡುತ್ತ ಕೈಕೊಳ್ಳುವಂ ।

ಂ ಭಕ್ತ ಜನಾಶ್ರಯಂ ಕರುಣದಿಂ ಕಾಪಾಡಲೀ ಸಂಸ್ಥೆಯಂ ॥ 4 ॥